– ಶ್ರೀ ಕಿಮ್ಮನೆ ರತ್ನಾಕರ್
– ಶ್ರೀ ಸಿದ್ದು ಸವದಿ
– ಶ್ರೀ ರವಿ ಸುಬ್ರಹ್ಮಣ್ಯ
– ಶ್ರೀ ಎಂ. ಸತೀಶ್ ರೆಡ್ಡಿ
– ಶ್ರೀ ಎನ್. ಯೋಗೀಶ್ ಭಟ್
– ಶ್ರೀ ಶ್ರೀಶೈಲಪ್ಪ ಬಿದರೂರು
– ಶ್ರೀ ಎಸ್. ಸುರೇಶ್‌ಕುಮಾರ್
(ಕಾನೂನು ಸಚಿವರು)
– ಶ್ರೀ ಬಿ.ಎಸ್. ಯಡಿಯೂರಪ್ಪ
(ಮುಖ್ಯಮಂತ್ರಿಗಳು)

(ಅನುಬಂಧ–7)

(iii) ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ಎರಡನೇ ತಿದ್ದುಪಡಿ) ವಿಧೇಯಕ, 2009

– ಶ್ರೀ ಬಿ.ಎಸ್.ಯಡಿಯೂರಪ್ಪ
(ಮುಖ್ಯಮಂತ್ರಿಗಳು)
– ಶ್ರೀ ಸಿದ್ದರಾಮಯ್ಯ
(ವಿರೋಧ ಪಕ್ಷದ ನಾಯಕರು)
– ಡಾ: ವಿ.ಎಸ್.ಆಚಾರ್ಯ

(ಅಂಗೀಕರಿಸಲಾಯಿತು)

10. ಪ್ರಕಟಣೆ : **267–430**

ವಿಷಯ : ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2009ನೇ ಸಾಲಿನ 'ಕರ್ನಾಟಕ ಸಿವಿಲ್ ನ್ಯಾಯಾಲಯಗಳು (ತಿದ್ದುಪಡಿ) ವಿಧೇಯಕವನ್ನು ದಿನಾಂಕ: 28.07.2009 ರಂದು ಯಾವುದೇ ತಿದ್ದುಪಡಿಯಿಲ್ಲದೆ ಅಂಗೀಕರಿಸಿರುವ ಬಗ್ಗೆ :

ಕರ್ನಾಟಕ ವಿಧಾನ ಸಭೆ

ಮಂಗಳವಾರ 28ನೇ ಜುಲೈ 2009ರಂದು ಸದನವು
ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು.
ಅಧ್ಯಕ್ಷರು ಶ್ರೀ ಜಗದೀಶ್ ಶೆಟ್ಟರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

(11–30 AM)

1. ನಿಯಮ 69ರ ಮೇರೆಗೆ ಮುಂದುವರೆದ ಚರ್ಚೆ :

ವಿಷಯ: ದಿನಾಂಕ 26–06–09 ರಂದು ವಿರೋಧ ಪಕ್ಷದ ನಾಯಕರ ಸ್ಥಾನಮಾನ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಹೊರಡಿಸಿರುವ ಸುತ್ತೋಲೆಯ ಬಗ್ಗೆ.

(ಸದನದ ಬಾವಿಯಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರು ಮತ್ತು ಜೆ.ಡಿ.ಎಸ್. ಪಕ್ಷದ ಶಾಸಕರು ಧರಣಿಯಲ್ಲಿ ನಿರತರಾಗಿದ್ದರು)

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರನ್ನು ಮತ್ತು ಜಿಲ್ಲಾ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗಾಗಲೇ ತಾವೇನು ನಿನ್ನೆಯ ದಿವಸ issue raise ಮಾಡಿದ್ದಿರಿ, ಅದರ ಬಗ್ಗೆ ತಮ್ಮ ಕಡೆಯಿಂದಲೂ ಅಭಿಪ್ರಾಯವನ್ನು ಹೇಳಿದ್ದೀರಿ ಮತ್ತು ಸರ್ಕಾರದ ಪರವಾಗಿ ಅದಕ್ಕೆ ಉತ್ತರವನ್ನೂ ಕೂಡ ಹೇಳಿದ್ದಾರೆ. ಆದುದರಿಂದ ಅದರ ಬಗ್ಗೆ ಮತ್ತೆ ಹೆಚ್ಚು ಬೆಳೆಸುವುದು ಬೇಡ. ಏಕೆಂದರೆ ಇನ್ನೂ Business ಸಾಕಷ್ಟು ಇದೆ. Demands ಮೇಲೆ ಇನ್ನೂ ಚರ್ಚೆಯೇ ಪ್ರಾರಂಭವಾಗಿಲ್ಲ. ಇವತ್ತು ನಿಜವಾಗಿಯೂ ಇದನ್ನು ಪಾಸ್ ಮಾಡಬೇಕಾಗಿದೆ. ಇವತ್ತು ಸಾಯಂಕಾಲ ದೊಳಗೆ Demands ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕಾಗಿತ್ತು. ನಾಳೆಯ ದಿವಸ ಅಧಿವೇಶನದ ಕೊನೆಯ ದಿವಸ ಎನ್ನುವುದೂ ಕೂಡ ಇದೆ. ಹೀಗಾಗಿ Calling Attention, Rule 69, Zero Hour ಹೀಗೆ ಇನ್ನೂ ಸಾಕಷ್ಟು ವಿಷಯಗಳನ್ನು ನಾವು ಚರ್ಚೆ ಮಾಡಬೇಕಾಗಿದೆ. ಅದಕ್ಕಾಗಿ ನಾನು ತಮ್ಮಲ್ಲಿ ಒಂದೇ ಇಂದು ವಿನಂತಿ

ಮಾಡಿಕೊಳ್ಳುವುದೇನೆಂದರೆ, ತಾವು ದಯವಿಟ್ಟು ಈ ಒಂದು ಧರಣಿಯನ್ನು ಅಂತ್ಯಗೊಳಿಸಿ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು ಮತ್ತು ಉಳಿದ proceedings ಗಳನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂಬ ವಿನಂತಿಯನ್ನು ನಾನು ಮಾಡಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ಸದನವನ್ನು ನಡೆಸಬಾರದು ಮತ್ತು Demands ಮೇಲೆ ಚರ್ಚೆಯನ್ನು ನಡೆಸಬಾರದು ಎನ್ನತಕ್ಕಂಥ ಉದ್ದೇಶ ನಮ್ಮದಾಗಿಲ್ಲ. ಅದಕ್ಕೋಸ್ಕರವೇ ನಾವು ಹೆಚ್ಚು ದಿವಸಗಳ ಕಾಲ ಅಸೆಂಬ್ಲಿಯನ್ನು ನಡೆಸ ಬೇಕೆಂದು ಮನವಿಯನ್ನೂ ಕೂಡ Business Advisory Committee ಯಲ್ಲಿ ಇಟ್ಟಿದ್ದೇವೆ. ನಾವು ಕನಿಷ್ಠ ಒಂದು ವರ್ಷದಲ್ಲಿ 60 ದಿವಸಗಳ ಕಾಲ ಅಸೆಂಬ್ಲಿಯನ್ನು ನಡೆಸಬೇಕೆಂದು ಕಾನೂನನ್ನು ಮಾಡಿಕೊಂಡಿದ್ದೇವೆ. ಆದರೆ ಈ ಸರ್ಕಾರ ಆ ಕಾನೂನು ಪ್ರಕಾರ ಅಸೆಂಬ್ಲಿಯನ್ನು ನಡೆಸುವುದಕ್ಕೆ ತಯಾರಿಲ್ಲ. ಹಿಂದೆಯೂ ಕೂಡ ನಡೆದಿಲ್ಲವೆನ್ನುತ್ತಾರೆ. ಕಾನೂನು ಮಾಡಿಕೊಂಡ ಮೇಲೆ 60 ದಿವಸಗಳ ಕಾಲ ಅಸೆಂಬ್ಲಿಯನ್ನು ನಡೆಸಬೇಕಾಗಿ ರತಕ್ಕಂಥದ್ದು ಸರ್ಕಾರದ ಮೇಲೆ ಇರತಕ್ಕಂಥ obligation, It is mandatory on the part of the Government. ಅದಕ್ಕೋಸ್ಕರವೇ 'shall' ಎನ್ನತಕ್ಕಂಥ ಪದವನ್ನು ಉಪಯೋಗಿಲಾಗಿದೆ. ಆದರೂ ಕೂಡ ಇವರು ಮಾಡಿಲ್ಲ. ಹಿಂದೆ ಮಾಡಿಲ್ಲ, ಅದಕ್ಕೋಸ್ಕರ ನಾವು ಮಾಡುತ್ತಿಲ್ಲ ವೆನ್ನುತ್ತಾರೆ. ಇವರು ಮುಂಚಿತವಾಗಿಯೇ ಅಸೆಂಬ್ಲಿಯನ್ನು ಕರೆಯಬೇಕಾಗಿತ್ತು. Demansds ಮೇಲೆ ಚರ್ಚೆ ಮಾಡುವುದಕ್ಕೆ ಒಂದು ತಿಂಗಳ ಸಮಯವನ್ನು ಇಡಬೇಕಾಗಿತ್ತು. ಅದನ್ನೂ ಕೂಡ ಇವರು ಮಾಡಲಿಲ್ಲ. ಎಷ್ಟು ಜಲ್ದಿಯೋ ಅಷ್ಟು ಜಲ್ದಿ ಮುಗಿಸಿಕೊಂಡು ಹೋಗಿಬಿಡಬೇಕು ಎನ್ನತಕ್ಕಂಥ ಭಾವನೆ ಸರ್ಕಾರದವರಲ್ಲಿದೆ. ವಿಷದವಾಗಿ ಎಲ್ಲ Demands ಮೇಲೆ ಚರ್ಚೆಯನ್ನು ಮಾಡಬೇಕು, ಎಲ್ಲಾ ಸದಸ್ಯರುಗಳಿಗೂ ಅವರ ಅಭಿಪ್ರಾಯಗಳನ್ನು ಹೇಳುವುದಕ್ಕೆ ಅವಕಾಶವಿರಬೇಕು, ಈ ಸರ್ಕಾರದಲ್ಲಿ ಏನೇನು ತಪ್ಪುಗಳು ನಡೆಯುತ್ತವೆ, ಏನೇನು ಲೋಪದೋಷಗಳಿವೆ, implementation of the program ನಲ್ಲಿ ಏನೇನು ಭ್ರಷ್ಟಾಚಾರ ನಡೆಯುತ್ತಿದೆ, ಅಧಿಕಾರಿಗಳ ಅದಕ್ಷತೆ ಏನಿದೆ, ಸರ್ಕಾರದ ಅದಕ್ಷತೆ ಏನಿದೆ, ಇವೆಲ್ಲವನ್ನೂ ಹೇಳುವುದಕ್ಕೆ ಅವಕಾಶಗಳು ಸಂಪೂರ್ಣವಾಗಿ ಇರಬೇಕಾಗಿತ್ತು. ಇವತ್ತು ಅನೇಕ

ಸಮಸ್ಯೆಗಳಿವೆ ಎಂದೇ ಈ ತರಹ ಬೇರೆ ಬೇರೆ ವಿಚಾರಗಳನ್ನು ಪ್ರತಿ ದಿನ ಕೂಡ ಒಂದೊಂದು adjournment motion ಮೂಲಕ ತರತಕ್ಕಂಥ ಪ್ರಯತ್ನವನ್ನು ನಾವು ಮಾಡಿದ್ದೇವೆ. ಹಿಂದೆ ಯಾರೂ adjournment motion ತಂದಿರಲಿಲ್ಲ. ಏಕೆಂದರೆ ಆಗ ರಾಜ್ಯದಲ್ಲಿ ಇಷ್ಟೊಂದು ಸಮಸ್ಯೆ ಗಳಿರಲಿಲ್ಲ. ಜನರು ಇಷ್ಟೊಂದು ಸಮಸ್ಯೆಗಳನ್ನು ಅನುಭವಿಸುತ್ತಿರಲಿಲ್ಲ. ಅದಕ್ಕೋಸ್ಕರ ಪ್ರತಿ ದಿನ ಒಂದೊಂದು ಹೊಸ ವಿಚಾರವನ್ನು, ಇತ್ತೀಚೆಗೆ ನಡೆದಂಥ ಘಟನೆಗಳು, ಜನರಿಗೆ ಆಗಿರತಕ್ಕಂಥ ಅನ್ಯಾಯಗಳ ಬಗ್ಗೆ, ಅಲ್ಲಿ ಆಗಿರತಕ್ಕಂಥ ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪ ಮಾಡಬೇಕಾದಂಥ ಅನಿವಾರ್ಯತೆ ಇದ್ದು ಈ ರೀತಿ ಇನ್ನೂ ಬೇಕಾದಷ್ಟು ಇದೆ. ಆದರೂ ಕೂಡ ನಮಗೆ ಸಮಯವಿಲ್ಲ. ಇವರು ನಮ್ಮ ಕಡೆ ತೋರಿಸುವುದಕ್ಕಿಂತ ಹೆಚ್ಚಾಗಿ ತಪ್ಪು ಅವರ ಕಡೆಯೇ ಇದೆ. ಅವರು ಕೇವಲ 12 ದಿವಸಗಳ ಕಾಲ ಅಧಿವೇಶನ ಕರೆದಿದ್ದರು. ಪಾಪ ಶಿವಲಿಂಗೇಗೌಡರು ಹೇಳಿದರು, Demands ಮೇಲೆ ಚರ್ಚೆ ಮಾಡಬೇಕಾದರೆ ಕನಿಷ್ಠ 15 ದಿವಸಗಳ ಕಾಲ ಅಧಿವೇಶನ ಕರೆಯಬೇಕೆಂದು. ಅವರು ಹೇಳಿದ ಮೇಲೆ ಮೂರು ದಿನ ಹೆಚ್ಚಾಯಿತು. ಮಾನ್ಯ ಅಧ್ಯಕ್ಷರೆ, 29ಕ್ಕೆ ಬಜೆಟ್ ಪಾಸ್ ಮಾಡಬೇಕು, 30ಕ್ಕೆ ಮಾಡಬೇಕೆಂದು ಸರ್ಕಾರ ಹಠಮಾರಿತನ ಮಾಡಬಾರದು. ಈಗ ನಾನು ಬಹಳ ದೀರ್ಘವಾಗಿ ಹೇಳುವುದಿಲ್ಲ. ಇವತ್ತು ನಾವು ಪ್ರಸ್ತಾಪ ಮಾಡಿರುವು ದೇನೆಂದರೆ, ವಿರೋಧ ಪಕ್ಷದ ನಾಯಕರ ಸ್ಥಾನ ಎನ್ನತಕ್ಕಂಥದ್ದು statutorily recognized post. ಮಾನ್ಯ ಅಧ್ಯಕ್ಷರೆ, ನೀವು ಅದನ್ನು ಇಲ್ಲಿ recognize ಮಾಡಿದ್ದೀರಿ. ಅನೇಕ ವರ್ಷಗಳಿಂದ ಎಲ್ಲ ವಿರೋಧ ಪಕ್ಷದ ನಾಯಕರುಗಳು ಅಧಿಕಾರಿಗಳನ್ನು ಕರೆದು ಅವರ ಜೊತೆ interact ಮಾಡಿ ಮಾಹಿತಿಯನ್ನು ಪಡೆದುಕೊಳ್ಳತಕ್ಕಂಥ ಕೆಲಸವನ್ನು ಎಲ್ಲಾ ಕಾಲದಲ್ಲಿಯೂ ಮಾಡಿದ್ದಾರೆ. ಇದನ್ನು ನಾವೇನೂ ಹೊಸದಾಗಿ ಮಾಡಿದ್ದಲ್ಲ. 1985 ರಲ್ಲಿ ಶ್ರೀ ಸತೀಶ್ ಚಂದ್ರನ್ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹೊರಡಿಸಿರು ವುದರಲ್ಲಿ ಏನು ಹೇಳಿದ್ದಾರೆಂದರೆ, review meeting ಮಾಡಬೇಡಿ ಎಂದು ಹೇಳಿದ್ದಾರೆಯೇ ಹೊರತು ಅಧಿಕಾರಿಗಳನ್ನು ಕರೆದು information ತೆಗೆದುಕೊಳ್ಳಬಾರದು ಎಂದು ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ. 1975 ರಲ್ಲಿ ಹೊರಡಿಸಿರುವ circular ನಲ್ಲಿಯೂ ಕೂಡ ಈ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ.

ಈಗ ನಾವೂ ಕೂಡ review meeting ಮಾಡುತ್ತೇವೆಂದು ಎಲ್ಲಿಯೂ ಹೇಳಿಲ್ಲ. Review Meeting ಮಾಡುವುದಕ್ಕೆ ನಮಗೆ ಅವಕಾಶ ಕೊಡಿ ಎಂದು ಕೇಳುವುದಕ್ಕೆ ಹೋಗಿಲ್ಲ. ಅಧಿಕಾರಿಗಳ ಹತ್ತಿರ ಆ ಸಂದರ್ಭಕ್ಕೆ ತಕ್ಕಂತೆ ಅತ್ಯಂತ ಅಗತ್ಯವಾಗಿರತಕ್ಕಂಥ, ತುರ್ತಾಗಿ ಬೇಕಾದಂಥ information ಗಳನ್ನು ಪಡೆದುಕೊಳ್ಳುವುದಕ್ಕೋಸ್ಕರವಾಗಿ ಅವರ ಜೊತೆ interact ಮಾಡಿ information ತೆಗೆದುಕೊಳ್ಳುವುದಕ್ಕೋಸ್ಕರವಾಗಿ ಹೋಗಿದ್ದು. ಈ ರೀತಿಯದ್ದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ, ಮುಂದೆಯೂ ಕೂಡ ಅದು ಮುಂದುವರೆಯಲಿ, ಇದು ಒಳ್ಳೆಯ ಸಂಪ್ರದಾಯ, ಪ್ರಜಾಪ್ರಭುತ್ವದ ಒಳ್ಳೆಯ ಬೆಳೆವಣಿಗೆ ದೃಷ್ಟಿಯಿಂದ ಇದು ಅತ್ಯಂತ ಅವಶ್ಯ ಎನ್ನತಕ್ಕಂಥದ್ದನ್ನು ನಾನು ಹೇಳಿದ್ದೇನೆ. ಅದಕ್ಕೋಸ್ಕರವೇ ನಾನು ಮಾವಳಂಕರ್ ಅವರು ಬರೆದಿರುವುದನ್ನು ನಾನು ಅನೇಕ ಸಾರಿ ಓದಿದ್ದೇನೆ. Do not stick to the rules and regulations. Do not stick to provisions of the law. Do not stick to the provisions of the Constitution. ಎಂದು ಹೇಳಿ ಒಂದು ಸಾರಿ ಮಾವಳಂಕರ್ ಕಾಲದಲ್ಲಿ ಇದ್ದಂಥದ್ದು. ಶ್ರೀ ಸಂಜೀವರೆಡ್ಡಿಯವರು ಲೋಕಸಭಾ ಸದಸ್ಯರಾಗಿದ್ದಾಗ ಅವರು ಲೋಕಸಭಾ ಅಧ್ಯಕ್ಷರಾಗಿದ್ದರು. ಆ ಪದವಿಯ ಅವಧಿ ಮುಗಿದ ಮೇಲೆ ನಾನು ಮತ್ತು ನನ್ನ ಸ್ನೇಹಿತರು ಮಾತನಾಡುತ್ತಿದ್ದಾಗ, ಮಾನ್ಯ ಅಧ್ಯಕ್ಷರೆ, ಅವರು ಅವರ ಸ್ನೇಹಿತರ ಜೊತೆ ಖಾಸಗಿಯಾಗಿ ಮಾತನಾಡುವಾಗ ಏನು ಹೇಳಿದ್ದಾರೆಂದರೆ, ತಾವು ಯಶಸ್ವಿಯಾಗಿ ಅಧ್ಯಕ್ಷ ಸ್ಥಾನವನ್ನು ಹೇಗೆ ನಿರ್ವಹಿಸಿದಿರಿ? ಈ ಯಶಸ್ಸಿನ ರಹಸ್ಯವೇನು ಎಂದು ಅವರ ಸ್ನೇಹಿತರು ಕೇಳಿದ್ದಾರೆ. ಆಗ ಅದಕ್ಕೆ ರೆಡ್ಡಿಯವರು ಏನು ಹೇಳಿದ್ದಾರೆಂದರೆ, I have never read rules ಎಂದು ಹೇಳಿದರು. ಆಗ ಅದಕ್ಕೆ ಅವರ ಸ್ನೇಹಿತರು, ಹಾಗಾದರೆ ನೀವು ಓದಿದ್ದಾದರೂ ಏನನ್ನು ಎಂದು ಕೇಳಿದ್ದಾರೆ. ಅದಕ್ಕೆ ರೆಡ್ಡಿಯವರು I read the feelings of the Members ಎಂದಿದ್ದಾರೆ.. What is the feelings if the Members here? The feelings of the Members is ನಮ್ಮ ಹಕ್ಕುಗಳಿಗೆ ನೀವು ಚ್ಯುತಿ ಮಾಡಬೇಡಿ. ಆದರೆ ಇಲ್ಲಿ ವಿರೋಧ ಪಕ್ಷದ ನಾಯಕರ ಹಕ್ಕಿಗೆ ಬಹಳ ಸ್ಪಷ್ಟವಾಗಿ ಚ್ಯುತಿಯಾಗುತ್ತಿದೆ. Because, I am statutorily recognized. ನೀವು ನನಗೆ ಇಲ್ಲಿ ಸ್ಥಾನಮಾನಗಳನ್ನು ಮನ್ನಣೆ ಮಾಡಿದ್ದೀರಿ. ನೀವು ನಮಗೆ ರಕ್ಷಣೆ

ಕೊಡಬೇಕಾದವರು. ಹೀಗಿದ್ದರೂ ಕೂಡ ಸರ್ಕಾರಕ್ಕೆ ನಾವು ಸಲಹೆಗಳನ್ನು ಕೊಟ್ಟಿದ್ದೇವೆ. ನೀವು ಕರೆದಾಗಲೂ ಕೂಡ ಹೇಳಿದ್ದೇವೆ. ಆದುದರಿಂದ ನೀವು ಇದನ್ನು Privilege Committee ಗೆ ಕೊಡಿ ಅಥವಾ Rules Committee ಗೆ ಕೊಡಿ Rules Committee is headed by none other than yourself. Hon'ble Speaker only. Rules ಮಾಡುವಾಗ ಸದನದಲ್ಲಿ ನಮ್ಮ ನಡುವಳಿಕೆಗಳು ಹೇಗಿರಬೇಕು, ಸದನದಲ್ಲಿ ಹೇಗೆ ನಡೆದುಕೊಳ್ಳಬೇಕು, ಸದನದಲ್ಲಿ ಹೇಗೆ ಚರ್ಚೆಯಾಗಬೇಕು, Leader of the House, Leader of the Opposition and all the Members of the House ಯಾವ ರೀತಿಯಲ್ಲಿ ಚರ್ಚೆಯಲ್ಲಿ ಭಾಗವಹಿಸಬೇಕು ಎನ್ನತಕ್ಕಂಥದ್ದರ ಬಗ್ಗೆ...

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ನಿನ್ನೆಯೇ ಈ ವಿಷಯದ ಬಗ್ಗೆ ಚರ್ಚೆಯಾಗಿದೆ. ಮತ್ತೆ ಅದನ್ನೇ ಹೇಳುತ್ತಿದ್ದಾರಲ್ಲ ಇವರು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಸ್ವಲ್ಪ ಕುಳಿತುಕೊಳ್ಳುವುದಕ್ಕೆ ಹೇಳಿ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಸರ್ಕಾರದ ಕಡೆಯಿಂದ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಅವರು ಮೊದಲು ಉತ್ತರ ಹೇಳಿ Complete ಮಾಡಲಿ ಆ ಮೇಲೆ ಏನಾದರೂ ಕೇಳುವುದಿದ್ದರೆ ಕೇಳುವಿರಂತೆ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಸಚಿವರು) : ನಿನ್ನೆಯೇ ಎಲ್ಲ ವಿಚಾರವನ್ನು ಹೇಳಿದ್ದಾರೆ. ಹೊಸ ವಿಚಾರಗಳು ಏನಾದರೂ ಇದ್ದರೆ ಹೇಳಲಿ. ಈಗಾಗಲೇ ನಿನ್ನೆಯ ದಿವಸ ನೀವು ಇದನ್ನೆಲ್ಲಾ ಹೇಳಿದ್ದೀರಿ. ನಾವು ಅದಕ್ಕೆ ಉತ್ತರವನ್ನು ಕೊಟ್ಟಾಗಿದೆ.

(ಗೊಂದಲ)

ಶ್ರೀ ಬಸವರಾಜು ಬೊಮ್ಮಾಯಿ : ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿನ ಬೆಳಿಗ್ಗೆಯಿಂದ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಇವತ್ತು ಧರಣಿಯಲ್ಲಿದ್ದಾರೆ. ಯಾವ ಜನರ ಸಮಸ್ಯೆಗಳ ಬಗ್ಗೆ ಇವರು ಇಲ್ಲಿ ಧರಣಿ ಮಾಡುತ್ತಿದ್ದಾರೆ? ಯಾವ ವಿಷಯದ ಮೇಲೆ ಇವರು ಧರಣಿ ಮಾಡುತ್ತಿದ್ದಾರೆ? ಯಾವ ಜನರು ಸಮಸ್ಯೆಯನ್ನು ಇಟ್ಟುಕೊಂಡು ಇವರು

ಧರಣಿಯನ್ನು ಮಾಡುತ್ತಿದ್ದಾರೆ? ಈಗ ಯಾವುದಾದರು ರೈತರ ವಿಷಯದ ಬಗ್ಗೆ ಇವರು ಚರ್ಚೆ ಮಾಡುತ್ತಿದ್ದಾರೆಯೆ? ಅಥವಾ ಯಾವುದಾದರೂ ನೆರೆ ಹಾವಳಿ ಬಗ್ಗೆ ಇವರು ಚರ್ಚೆ ಮಾಡುತ್ತಿದ್ದಾರೆಯೆ? ಜನರು ಕಷ್ಟ ಕಾರ್ಪಣ್ಯದ ಬಗ್ಗೆ ಇವರು ಚರ್ಚೆ ಮಾಡುತ್ತಿದ್ದಾರೆಯೆ? ಈ ಸದನವನ್ನು ಇವರು ದುರುಪಯೋಗ ಮಾಡುತ್ತಿದ್ದಾರೆ. ಇದು ಒಂದು Irresponsible Opposition. It is not a responsible Opposition. ಇದು ನಮ್ಮ ಮತ್ತು ಆ ಕಡೆಯ ಸದಸ್ಯರ ಹಕ್ಕಿಗೆ ಚ್ಯುತಿಯಾಗುತ್ತಿದೆ. ಇದು ಎಲ್ಲಾ ಸದಸ್ಯರ ಹಕ್ಕುಚ್ಯುತಿಯಾಗುತ್ತಿದೆ. ಎಲ್ಲಾ ಸದಸ್ಯರು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ತಯಾರು ಮಾಡಿಕೊಂಡು ಬಂದಿದ್ದಾರೆ, ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ಧವಿದೆ.

ಶ್ರೀ ಸಿದ್ದರಾಮಯ್ಯ : ಉತ್ತರ ಕೊಡುತ್ತೀದ್ದೀರಲ್ಲ.

ಶ್ರೀ ಬಸವರಾಜ್ ಬೊಮ್ಮಾಯಿ : ಯಾವ ರಾಜ್ಯದ ಮಹತ್ವದ ವಿಷಯವನ್ನು ಇಟ್ಟುಕೊಂಡು ಧರಣಿ ಮಾಡುತ್ತಿದ್ದೀರಿ? ಅದು ಜನರಿಗೆ ಗೊತ್ತಾಗಬೇಕಲ್ಲ.

ಅಧ್ಯಕ್ಷರು : ಅವರು ಎರಡು ನಿಮಿಷದಲ್ಲಿ ಮುಗಿಸುತ್ತಾರೆ, please, within two minutes they will complete.

ಶ್ರೀ ಬಸವರಾಜ ಬೊಮ್ಮಾಯಿ : ಯಾವ ರಾಜ್ಯದ ಮಹತ್ವದ ವಿಚಾರವನ್ನು ತೆಗೆದುಕೊಂಡು ಧರಣಿ ಮಾಡುತ್ತಿದ್ದಾರೆ. ಇದೊಂದು ಜವಾಬ್ದಾರಿಯುತ opposition ಎಂದು ಕರೆಯಬೇಕು? ಎಲ್ಲಾ ಸದಸ್ಯರ ಹಕ್ಕುಚ್ಯುತಿಯಾಗುತ್ತಿದೆ. ಅವರು ಎಲ್ಲ ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ತಯಾರು ಮಾಡಿಕೊಂಡು ಬಂದಂತಹ ಸದಸ್ಯರ ಹಕ್ಕುಚ್ಯುತಿಯಾಗುತ್ತಿದೆ. ಇದು ಒಳ್ಳೆಯ precedent ಆಗುವುದಿಲ್ಲ. This is not a good precedent.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತಾರೆ. ದಯವಿಟ್ಟು ಎಲ್ಲಾ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : Nobody can avoid this house to answer. ಎಲ್ಲಾ ಸದಸ್ಯರ ಹಕ್ಕಿದೆ. It is now allowed. ಸದಸ್ಯರ ಹಕ್ಕುಚ್ಯುತಿಯಾಗುತ್ತಿದೆ.

ಅಧ್ಯಕ್ಷರು : ಅವರು ಎರಡು ನಿಮಿಷದಲ್ಲಿ ಮುಗಿಸುತ್ತಾರೆ, ಆಮೇಲೆ ಸುರೇಶ್‌ಕುಮಾರ್‌ರವರು ಮಾತನಾಡುತ್ತಾರೆ.

ಶ್ರೀ ಬಸವರಾಜ ಬೊಮ್ಮಾಯಿ : ಯಾವ ಜನರ ಸಮಸ್ಯೆ ತೆಗೆದುಕೊಂಡು ಧರಣಿಗೆ ಹೊಗುತ್ತಿದ್ದೀರಿ? ವಿರೋಧ ಪಕ್ಷಗಳ ಸ್ಥಾನಮಾನದ ಬಗ್ಗೆ ಗೌರವವಿದೆ. ಈಗಾಗಲೇ ಒಂದು convention ಇದೆ. ಮತ್ತೆ ಯಾವುದರ ಬಗ್ಗೆ ಚರ್ಚೆ?

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ತಾವು ಎದ್ದು ನಿಂತುಕೊಂಡರೂ ಅವರು ಕುಳಿತುಕೊಳ್ಳುವುದಿಲ್ಲವೆಂದರೆ, this is not the way.

ಅಧ್ಯಕ್ಷರು : ದಯವಿಟ್ಟು ನೀವು ಕುಳಿತುಕೊಳ್ಳಿ, ಅವರು ಎರಡು ನಿಮಿಷದಲ್ಲಿ ಮುಗಿಸುತ್ತಾರೆ. ಆಮೇಲೆ ಎಲ್ಲಾ ಮಿನಿಸ್ಟರ್ ಏನು ಹೇಳುತ್ತಾರೆ ನೋಡೋಣ. ಎರಡು ನಿಮಿಷ, ಆಮೇಲೆ ನೀವು ಯಾರಾದರೊಬ್ಬರು ಮಾತನಾಡಿ. ನಿಮಗೆ ಅಲೊ ಮಾಡುತ್ತೇನೆ. ಅವರು ಮಾತನಾಡಿದ ಮೇಲೆ ನೀವು ಮಾತನಾಡಿ. ಶ್ರೀನಿವಾಸ್‌ರವರೇ, ಸಿದ್ದು ಸವದಿಯವರೇ, ರೇಣುಕಾಚಾರ್ಯರವರೇ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : It is too much. You have to tell them seriously.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ಆಡಳಿತ ಪಕ್ಷಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಸಿದ್ದರಾಮಯ್ಯನವರಿಗೆ ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ. ನೀವು ಏನು ಹೇಳುತ್ತೀರಿ? ಒಬ್ಬರು ಮಾತನಾಡಿ, ಎಲ್ಲರೂ ಕುಳಿತುಕೊಳ್ಳಿ. ಸಿದ್ದರಾಮಯ್ಯನವರು ಎರಡು ನಿಮಿಷದಲ್ಲಿ ಮಾತನಾಡುತ್ತಾರೆ, ಆಮೇಲೆ ಮಾನ್ಯ ಸುರೇಶ್‌ಕುಮಾರ್ ಏನು ಹೇಳುತ್ತಾರೆ ನೋಡೋಣ, ತಾವು ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚು ಹೊತ್ತು ಭಾಷಣ ಮಾಡುವುದಕ್ಕೆ ನಿಂತಿಲ್ಲ. ನಾನು ನಿನ್ನೆ ಎಲ್ಲ ವಿಚಾರ ಹೇಳಿದ್ದೇನೆ. ನಮಗೆ ಸವಲತ್ತುಗಳನ್ನು ಕೊಡಿ ಎಂದು ಕೇಳುವುದಕ್ಕೆ ನಿಂತಿಲ್ಲ. ವಿರೋಧ ಪಕ್ಷದವರಿಗೆ ಕೊಟ್ಟಿರುವಂತಹ ಎಲ್ಲಾ ಸವಲತ್ತುಗಳನ್ನು ತಿದ್ದುಪಡಿ ಮಾಡಿ ನೀವು ಬೇಕಾದರೆ ವಾಪಸ್ಸು ತೆಗೆದುಕೊಳ್ಳಿ. Absolutely I have no

objection. ನಾವು ಸವಲತ್ತುಗಳನ್ನು ಕೇಳುವುದಕ್ಕೆ ನಿಂತಿಲ್ಲ. ಆದರೆ ಆ ಹಕ್ಕುಗಳಿಗೆ ಮೊಟಕು ಆದಾಗ ಅದನ್ನು ನಾವು ರಕ್ಷಣೆ ಮಾಡಿಕೊಳ್ಳ ಬೇಕಾಗುತ್ತದೆ. ನಮ್ಮ ಹಕ್ಕುಗಳನ್ನು ಚಲಾಯಿಸುವುದಕ್ಕೆ, ನಮ್ಮ ವಾಕ್ ಸ್ವಾತಂತ್ರ್ಯವನ್ನು ಹೇಳುವುದಕ್ಕೆ ನಾವು ಇವೆಲ್ಲವನ್ನು ರೂಲ್‌ನಲ್ಲಿ ಮಾಡಿಕೊಂ ಡಿದ್ದೇವೆ. ಅದಕ್ಕೆ ಧಕ್ಕೆ ಬಂದಾಗ, ಚ್ಯುತಿ ಬಂದಾಗ we can't keep quite. ಇವತ್ತು ನಾವು ಏನು ಕೇಳಿದ್ದೇವೆ, ಮೊದಲಿನಿಂದಲೂ ನಡೆದುಕೊಂಡು ಬಂದಿರುವಂತಹ convention ಏನಿದೆ ಅದರ ಪ್ರಕಾರ ನಡೆಯಲಿ, ನೀವು ಇತ್ತೀಚೆಗೆ issue ಮಾಡಿರುವಂತಹ circular ಇದೆಯಲ್ಲ, ಅದು ಹಕ್ಕುಚ್ಯುತಿ ಯಾಗುತ್ತದೆ ಎಂದು ಹೇಳುದ್ದೇವೆ. ಮಾನ್ಯ ಅಧ್ಯಕ್ಷರೆ, ನಿನ್ನೆ ನೀವು ಕರೆದು ಹೇಳಿದ್ದೀರಿ, ನಾವು ಸಲಹೆಗಳನ್ನು ಕೊಟ್ಟಿದ್ದೇವೆ. ಅವರು ನಮ್ಮ ಸಲಹೆಗಳಿಗೂ ಕೂಡ ಬಗ್ಗಿಲ್ಲ. ಸರಕಾರ ಮೊಂಡಾಟ ಆಡುತ್ತಿದೆ. ಅವರು ಒಣ ಪ್ರತಿಷ್ಠೆ ಮಾಡಿಕೊಂಡಿದ್ದಾರೆ. ನಾವು ಜನರ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಕಾರ್ಯ ಕ್ರಮಗಳು ಜಾರಿಯಾಗಬೇಕು ಎನ್ನುವ ಸದುದ್ದೇಶದಿಂದ, ಸದ್ಭಾವನೆಯಿಂದ ಇದನ್ನು ಪ್ರಸ್ತಾಪ ಮಾಡಿದ್ದೇವೆ ಹೊರತು ಸದನ ನಡೆಯಬಾರದು, ಬೇಡಿಕೆಗಳು ಚರ್ಚೆಯಾಗಬಾರದು ಎನ್ನುವುದು ನಮ್ಮ ಉದ್ದೇಶವಲ್ಲ. ನಾವು ಡಿಮ್ಯಾಂಡ್ಸ್ ಚರ್ಚೆ ಮಾಡುವುದಕ್ಕೆ ತಯಾರಾಗಿದ್ದೇವೆ. ಇದಾದಮೇಲೆ ಇವತ್ತು, ನಾಳೆ ಎಲ್ಲಿಯವರೆಗೆ ಚರ್ಚೆ ನಡೆಯುತ್ತದೆ ಅಲ್ಲಿಯವರೆಗೂ ಕೂಡ ಚರ್ಚೆ ಮಾಡುವುದಕ್ಕೆ ನಾವು ತಯಾರಾಗಿದ್ದೇವೆ. ಈಗ ಮತ್ತೆ ಪ್ರಾರಂಭ ಮಾಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ನಿನ್ನೆಯಿಂದ ಇಲ್ಲಿಯೇ ಕುಳಿತಿದ್ದಾರೆ, ನಾನು ನೋಡುತ್ತಿದ್ದೇನೆ. ಇವರು Leader of the House. ಅವರು ಹೌಸ್ ಯಾವ ರೀತಿ ನಡೆಯಬೇಕು ಎನ್ನುವುದರ ಬಗ್ಗೆ ಮಾತನಾ ಡುವುದಿಲ್ಲ. ಇವರು ಮೊಂಡಾಟಕ್ಕೆ ನಿಂತುಕೊಂಡಿದ್ದಾರೆ, ಒಣಪ್ರತಿಷ್ಠೆಗೆ ನಿಂತುಕೊಂಡಿದ್ದಾರೆ, ವಿರೋಧ ಪಕ್ಷದವರು ಅಧಿಕಾರಿಗಳ ಜೊತೆ ಚರ್ಚೆ ಮಾಡಿದರೆ ಎನ್ನುವ ಭಯವಿದೆ, ಅವರು ಭ್ರಷ್ಟಾಚಾರ ಮುಚ್ಚಬೇಕು ಎಂದು ಈ ರೀತಿ ಮಾಡುತ್ತಿದ್ದಾರೆ. ನಾವು ಇದನ್ನು ಪ್ರತಿಭಟಿಸುತ್ತೇನೆ. ನಮ್ಮ ಎಲ್ಲಾ ಮಾನ್ಯ ಸದಸ್ಯರುಗಳು ಅವರ ಸ್ಥಾನಗಳಿಗೆ ವಾಪಸ್ಸು ಬಂದು ಕುಳಿತುಕೊಳ್ಳಿ. We are ready for any long discussion. Demands ಮೇಲೆ ಚರ್ಚೆ ಮಾಡುವುದಕ್ಕೆ we are ready. ಅವರು ಈ ಸಂದರ್ಭ

ಉಪಯೋಗಿಸಿಕೊಂಡು ಗಿಲೆಟಿನ್ ಮಾಡಿಕೊಂಡು ಹೋಗೋಣ ಎಂದು ಯೋಚನೆ ಮಾಡುತ್ತಿದ್ದಾರೆ. they don't want to discuss on demands.

(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದ ಸದಸ್ಯರುಗಳು ಸದನದ ಬಾವಿಯಿಂದ ಹೊರಗೆ ಬಂದು ಅವರವರ ಸ್ಥಾನಗಳಲ್ಲಿ ಕುಳಿತುಕೊಂಡರು)

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ಬಜೆಟ್ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ನಾನು ನಿಮಗೆ ಒಂದು ನೋಟೀಸ್ ಕೊಟ್ಟಿದ್ದೇನೆ. ನೀವು ಆಮೇಲೆ ಮಾತನಾಡಿ. ನೀವು ನೋಟೀಸ್ ಕೊಟ್ಟಿದ್ದೀರಾ?

ಶ್ರೀ ಆರ್. ಅಶೋಕ್ : ನಿಮ್ಮ ಆ ನೋಟೀಸ್ ಬಗ್ಗೆ ಮಾತನಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವುದಕ್ಕೆ ಎದ್ದು ನಿಂತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಇಲ್ಲ, ಅವರು ಯಾವುದರ ಬಗ್ಗೆ ಮಾತನಾಡುತ್ತಾರೆ? ನೋಟೀಸ್ ಬಗ್ಗೆ ಮಾತನಾಡುತ್ತಾರಾ? ನಾನು ನೋಟೀಸ್ ಬಗ್ಗೆ ಪ್ರಸ್ತಾಪ ಮಾಡುತ್ತೇನೆ, ಆಮೇಲೆ ಅವರು ಮಾತನಾಡಲಿ. As a Leader of the House, he has got every right to speak.

ಅಧ್ಯಕ್ಷರು : ಅವರು ಎದ್ದು ನಿಂತಿದ್ದಾರೆ, ಅವರು ಏನು ಹೇಳುತ್ತಾರೆ ಕೇಳೋಣ ಆಮೇಲೆ ನೀವು ಹೇಳುವಿರಂತೆ.

ಶ್ರೀ ಸಿದ್ದರಾಮಯ್ಯ : ಪುನ: ನಾನು ಮತ್ತೆ ಹೇಳಬೇಕಾಗುತ್ತದೆ. Leader of the House ಗೆ ಮಾತನಾಡುವುದಕ್ಕೆ ಅವಕಾಶ ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಪ್ರತಿಪಕ್ಷದ ನಾಯಕರು ಹೇಳಿದಂತಹ ಬಹಳಷ್ಟು ವಿಷಯಗಳು ದಾಖಲೆಗೆ ಹೋಗಿದೆ. ಈ ಸರ್ಕಾರ ಯಾವುದೇ ಹಗರಣಗಳ ಬಗ್ಗೆ ಯಾವುದೇ ವಿಚಾರಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಆಸಕ್ತಿ ಇಲ್ಲ, ಚರ್ಚೆಯಿಲ್ಲದೆ ಗಿಲೆಟಿನ್ ಹಾಕಿ ಬಜೆಟ್‌ನ್ನು ಪಾಸ್ ಮಾಡಿಸಿಕೊಂಡು ಹೋಗುವ ತರಾತುರಿಯಲ್ಲಿ ಇವರು ಇದ್ದಾರೆ, ನಾನು ಒಬ್ಬ ಮುಖ್ಯಮಂತ್ರಿಯಾಗಿ ಇಲ್ಲಿ ಕುಳಿತುಕೊಂಡು, ಸದನದ ಕಾರ್ಯಕಲಾಪ ಹೇಗೆ ನಡೆಯಬೇಕು ಎಂದು

ಚಿಂತೆ ಮಾಡದಿರುವಂತಹ ರೀತಿಯಲ್ಲಿ ಅವರ ನಡವಳಿಕೆ ಇದೆ ಎನ್ನುವಂತಹ ಮಾತನ್ನು ಅವರು ಹೇಳಿದ್ದಾರೆ. ಇಸ್ಕಾನ್ ಬಗ್ಗೆ ಇಲ್ಲಿ ಚರ್ಚೆಯಾಯಿತು. ಅದಕ್ಕೆ ಸದನದ ಸಮಿತಿ ಮಾಡಿದೆವು. ಹೌಸಿಂಗ್ ಬಗ್ಗೆ ಚರ್ಚೆಯಾಯಿತು ರಾಜ್ಯಪಾಲರ ಹತ್ತಿರ ಹೋದಿರಿ. ಅದಕ್ಕೆ ನಾವು ಚೀಫ್ ಸೆಕ್ರೆಟರಿಯಿಂದ ತನಿಖೆ ಮಾಡಿಸುತ್ತೇವೆಂದು ಹೇಳಿದೆವು. ರಾಮಸ್ವಾಮಿ ಸಮಿತಿ ಮಾಡಿ ಒತ್ತುವರಿ ಮಾಡಿದಂತಹ ಜಮೀನು ಬಗ್ಗೆ ಒಬ್ಬರು ಉನ್ನತ retired IAS ಅಧಿಕಾರಿ ಹೆಸರಿನಲ್ಲಿ ತನಿಖೆ ಮಾಡುವುದಕ್ಕೆ ಸಮಿತಿ ಮಾಡಿದ್ದೇವೆ. ಘನತ್ಯಾಜ್ಯವಸ್ತುಗಳ ಬಗ್ಗೆ ಆ ಮನೆಯಲ್ಲಿ ಚರ್ಚೆಯಾದಾಗ COD ಗೆ refer ಮಾಡಿದ್ದೇನೆ. ಹೀಗೆ ಗಂಭೀರವಾದ ವಿಷಯಗಳನ್ನು ಪ್ರತಿಪಕ್ಷದವರು ಪ್ರಸ್ತಾಪ ಮಾಡಿದಾಗ ಯಾವುದೇ ಒಣ ಪ್ರತಿಷ್ಠೆಗೆ ನಿಂತುಕೊಳ್ಳದೆ ತತ್‌ಕ್ಷಣ ನಿಮ್ಮ ಕೊಠಡಿಗೆ ಒಂದು ಚರ್ಚೆ ಮಾಡಿದ್ದೇವೆ. ಅಲ್ಲಿ ಮಾನ್ಯ ಸಭಾಪತಿಯವರ ಕೊಠಡಿಗೆ ಹೋಗಿ ಚರ್ಚೆ ಮಾಡಿದ್ದೇವೆ. ಒಂದು ಒಳ್ಳೆಯ ರೀತಿಯಲ್ಲಿ ಕಾರ್ಯಕಲಾಪ ನಡೆಯಬೇಕು ಎನ್ನುವ ದೃಷ್ಟಿಯಿಂದ ನಾವು ಚರ್ಚೆಯನ್ನು ಮಾಡಿದ್ದೇವೆ. ಜಾರಿಗೆ ಬಂದಮೇಲೆ ಈ ನಾಡಿನ ಯಾವುದೇ ಒಬ್ಬ ಸತ್ಪಜೆ, ಶಾಸಕರು, ಪ್ರತಿಪಕ್ಷದ ನಾಯಕರು ಸೇರಿದಂತೆ ಮಾಹಿತಿಗಳನ್ನು ಪಡೆಯುವುದಕ್ಕೆ ಸಾರ್ವಭೌಮ ಅಧಿಕಾರ ಇದೆ. ನಮ್ಮ ಪ್ರತಿಪಕ್ಷದ ನಾಯಕರು ಈ ಆಯವ್ಯಯದ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಕೆಲವು ಮಾಹಿತಿಗಳು ಬೇಕೆಂದು ಕಳುಹಿಸಿದಾಗ ತತ್‌ಕ್ಷಣ ಆ ಮಾಹಿತಿಯನ್ನು ಇದಗಿಸಿಕೊಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಿದ್ದೇವೆ. ಇಲ್ಲಿ 60 ದಿವಸಗಳು ಅಧಿವೇಶನ ನಡೆಯಬೇಕು. ಹಿಂದೆ ಯಾರು ಏನು ಮಾಡಿದರೆಂಬ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. ನಾನು ಬಜೆಟ್ ಅಧಿವೇಶನ ಎಷ್ಟು ದಿವಸಗಳು ನಡೆಯಿತೆಂಬ ಬಗ್ಗೆಯೂ ಚರ್ಚೆ ಮಾಡುವುದಿಲ್ಲ. ನೀವು ಬರುವ ದಿವಸಗಳಲ್ಲಿ ಎಷ್ಟು ದಿವಸಗಳು ಅಧಿವೇಶನ ನಡೆಯಬೇಕೆಂದು ಅಪೇಕ್ಷೆ ಪಡುತ್ತಿರೋ, ನಾವೇ ಮಾಡಿಕೊಂಡ ರೂಲ್ಸ್ ಪ್ರಕಾರ 60 ದಿವಸಗಳು ಅಧಿವೇಶನ ನಡೆಯಬೇಕೆಂದು ಏನು ನೀವು ಮಾಡಿಕೊಂಡಿದ್ದೀರಿ. ಅದನ್ನು ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. ನಾವು ಬೆನ್ನು ತೋರಿಸಿ ಓಡಿ ಹೋಗುವುದಕ್ಕೆ ಬಂದಿಲ್ಲ. ಯಾವುದೇ ಹಗರಣದ ವಿಷಯ, ಯಾವುದೇ ಮಾಹಿತಿಗಳು, ಅದನ್ನು ತಾವು ಎಷ್ಟು

(12-00 PM)

ಸಮಯವನ್ನು ನಮಗೆ ಕೊಡುತ್ತೀರೋ, ಅಷ್ಟು ಸಮಯ ನಾವು ಚರ್ಚೆ ಮಾಡುವುದಕ್ಕೆ ಸಿದ್ಧವಿದ್ದೇವೆ. ನಾಡಿನ ಜನತೆಗೆ ಸತ್ಯಾಸತ್ಯತೆಗಳು ಹೋಗಬೇಕೆನ್ನುವುದರ ಬಗ್ಗೆ ನಮ್ಮದು ಎರಡು ಮಾತಿಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಡಳಿತ ಪಕ್ಷಕ್ಕೆ ಎಷ್ಟು ಜವಾಬ್ದಾರಿ ಇದೆಯೋ, ಅದಕ್ಕಿಂತ ಹೆಚ್ಚಿನ ಜವಾಬ್ದಾರಿ ಪ್ರತಿ ಪಕ್ಷಗಳ ಮೇಲಿದೆ. ತಾವು ನೋಡಿ, ನಾನು ಸರ್ಕಾರದ ಜವಾಬ್ದಾರಿಯನ್ನು ವಹಿಸಿಕೊಂಡ ಮೇಲೆ ಇವತ್ತಿನವರೆಗೂ ಯಾವುದೇ ಸಂದರ್ಭದಲ್ಲಿ ಬಜೆಟ್ ಬಗ್ಗೆ ಚರ್ಚೆಗಳು ಆಗಿಲ್ಲ. ಅದು ಬೆಳಗಾವಿಯಲ್ಲಿ ನಡೆದ ಅಧಿವೇಶನವಿರಬಹುದು, ಇಲ್ಲಿ ಇರಬಹುದು, ಚರ್ಚೆಗೆ ಅವಕಾಶವೇ ಆಗಲಿಲ್ಲ. ಇದಕ್ಕೆ ಅಡ್ಡಿ ಮಾಡಿದವರು ಯಾರು? ನಿಮಗೆ ಯಾವುದು ಮಹತ್ವ ವಿಷಯವೆಂದು ಹೇಳಿದಿರೋ ಆ ವಿಷಯವನ್ನು ತೆಗೆದುಕೊಂಡಿದ್ದೀರಿ, ಅದಕ್ಕೆ ನಮಗೇನು ಬೇಸರವಿಲ್ಲ. ನಿಮಗೆ ಸಂಪೂರ್ಣ ಸ್ವಾತಂತ್ರ್ಯವಿದೆ, ಯಾವ ವಿಷಯ ತೆಗೆದು ಕೊಳ್ಳಬೇಕು, ಯಾವ ವಿಷಯ ತೆಗೆದುಕೊಳ್ಳಬಾರದೆನ್ನುವುದಕ್ಕೆ ನಾನಲ್ಲ. ಈ ಸಾರ್ವಭೌಮ ಅಧಿಕಾರ ಅಧ್ಯಕ್ಷರಿಗೆ ಇದೆ. ನಿಯಮಾವಳಿಗಳ ಪ್ರಕಾರ ಸುಮಾರು ಅರ್ಧ ಗಂಟೆ ಕಾಲ ಚರ್ಚೆಯಾಗಬೇಕಾಗಿರುವಂಥಾದ್ದು, ಒಂದು ಗಂಟೆ ಚರ್ಚೆಯಾಗ ಬೇಕಾಗಿರುವಂಥಾದ್ದಕ್ಕೆ ಮೂರು, ನಾಲ್ಕು ಗಂಟೆಗಳ ಕಾಲ ಅಧ್ಯಕ್ಷರು ಅವಕಾಶವನ್ನು ಮಾಡಿಕೊಟ್ಟರೂ ಸಹ ನಾವು ಶಾಂತವಾಗಿ ತಲೆಬಾಗಿ ಕೇಳುತ್ತಿದ್ದೇವೆ. ಈಗ ಪ್ರತಿ ಪಕ್ಷದ ನಾಯಕರ ಅಧಿಕಾರದ ಬಗ್ಗೆ, ನಾನು ಕೂಡ ಪ್ರತಿಪಕ್ಷದ ನಾಯಕನಾಗಿದ್ದೆ. ಅನೇಕ ಜನರು ಅಲ್ಲಿ ಇರುವವರು ಪ್ರತಿ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ಯಾವತ್ತು ಅಧಿಕಾರಿಗಳ ಸಭೆಯನ್ನು ಕರೆದು ಮಾಡುವುದಕ್ಕೆ ಅವಕಾಶ ಇತ್ತು? ನಾನೇ ಸ್ವತಃ ವಿರೋಧ ಪಕ್ಷದ ನಾಯಕನಾಗಿ ಬಾದಾಮಿಯಲ್ಲಿ ಬರಗಾಲದ ಕಾಮಗಾರಿಯನ್ನು ನೋಡಲು ಹೋದಾಗ ಅಲ್ಲಿ ತಹಶೀಲ್ದಾರರನ್ನು request ಮಾಡಿಕೊಂಡರೂ ಬರಲಿಲ್ಲ. ನಾನು ಇಡೀ ರಾತ್ರಿ ಧರಣಿ ಮಾಡಬೇಕಾಗಿತ್ತು, ಸತ್ಯಾಗ್ರಹ ಮಾಡಬೇ ಕಾಯಿತು. ಅವರು ಬರಲಿಲ್ಲ, ಕಳುಹಿಸುವುದಿಲ್ಲವೆಂದು ಹೇಳಿದರು. ನಾನು D.C. ಯವರನ್ನು ಸಂಪರ್ಕ ಮಾಡಿದೆ, ಬಂದ್‌ಗೆ ಕರೆ ಕೊಟ್ಟೆ. ನಾನು ಪ್ರತಿಪಕ್ಷದ ನಾಯಕನಾಗಿದ್ದಾಗ ನನ್ನ ಅನುಭವ, Democracy ನಲ್ಲಿ, ಕಾನೂನು ಚೌಕಟ್ಟಿನಲ್ಲಿ ನಾವೇ ಮಾಡಿಕೊಂಡಿರುವಂಥ rules ಪ್ರಕಾರ

ಏನೇನು ಅವಕಾಶಗಳು ಇದೆಯೋ ಅದನ್ನು ಕೊಡುವುದಕ್ಕೆ ಯಾವುದೇ ಅಡ್ಡಿ ಇಲ್ಲ. ನಿನ್ನೆ ಕಾನೂನು ಸಚಿವರಾದ ಶ್ರೀ ಸುರೇಶ್‌ಕುಮಾರ್‌ರವರು ಉತ್ತರ ಕೊಡುವಂಥ ಸಂದರ್ಭದಲ್ಲಿ ದೇಶದ ಯಾವ್ಯಾವ ರಾಜ್ಯಗಳಲ್ಲಿ ಏನೇನು ಸತ್ಸಂಪ್ರದಾಯಗಳು ಇವೆ, ಪದ್ಧತಿಗಳಿವೆಯೆಂಬುದನ್ನು ಮಾಹಿತಿಗಳನ್ನು ತರಿಸಿಕೊಂಡು ತಮಗೆ ಒದಗಿಸಿ ಕೊಟ್ಟಿದ್ದೇವೆ. ಇಂಥ ಸಂದರ್ಭ ಬಂದಾಗ ನಮಗೂ ನಿಮಗೂ ಮೇಲ್ಪಂಕ್ತಿ ಯಾರು? ಲೋಕಸಭೆಯ ಕಾರ್ಯಕಲಾಪಗಳು, ನೀವು ಈಗಲೇ ಲೋಕಸಭೆಯ ಸೆಕ್ರೆಟರಿಯವರಿಗೆ ಒಂದು ಪತ್ರವನ್ನು ಬರೆಯಿರಿ. ಈ ದೇಶದ ಯಾವ್ಯಾವ ರಾಜ್ಯಗಳಲ್ಲಿ ಏನು ಅಧಿಕಾರವಿದೆ, ಇವತ್ತು ಪ್ರತಿ ಪಕ್ಷದ ನಾಯಕರಾದ ಲಾಲ್ ಕೃಷ್ಣ ಅಡ್ವಾಣಿಯವರು ಕರ್ನಾಟಕಕ್ಕೆ ಬಂದು ಇಲ್ಲಿ ಅಧಿಕಾರಿಗಳನ್ನು ಕರೆದು ಸಭೆಯನ್ನು ಮಾಡುವುದಕ್ಕೆ ಆಗುವುದಿಲ್ಲ. ಅವರು ಬಂದು ಇಲ್ಲಿ ಅಧಿಕಾರಿಗಳನ್ನು ಕರೆದು ಸಭೆ ಮಾಡುವುದಕ್ಕೆ ಆಗುವುದಿಲ್ಲ. ನೀವು ಹೇಳುವಂಥಾದ್ದು ನಾವು ಮಾಹಿತಿಯನ್ನು ಕೇಳುತ್ತಿದ್ದೇವೆಂದರೆ, ನಾವು ಮಾಹಿತಿಯನ್ನು ಕೊಡುವುದಕ್ಕೆ 24 ಗಂಟೆಗಳು ರೆಡಿಯಾಗಿದ್ದೇವೆ. ಯಾವುದೇ ಅಧಿಕಾರಿಗಳು, ಶಾಸಕರು ಸೇರಿ ಮಾಹಿತಿಗಳನ್ನು ಕೇಳಿದಾಗ ಕೊಡುವ ವಿಚಾರದಲ್ಲಿ ನಿರ್ಲಕ್ಷ್ಯ ಮಾಡಿದರೆ ನಾನು ಅವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ನಮಗೆ ಮಾಹಿತಿಗಳನ್ನು ಕೊಡುವುದಕ್ಕೆ ಯಾವುದೇ ಅಡ್ಡಿ ಆತಂಕವಿಲ್ಲ. ಆದರೆ ಸಭೆಯನ್ನು ಕರೆದು ಅಧಿಕಾರಿಗಳಿಗೆ ಧಮಕಿ ಹಾಕಿ, ಈ ರೀತಿಯ ಘಟನಾವಳಿಗಳು ಪತ್ರಿಕೆಗಳಲ್ಲಿ ಬಂದಿದೆ. ಇದಕ್ಕೆ ಮಾತ್ರ ನಮ್ಮ ಚರ್ಚೆ ಮಾಡೋಣ, ಇವತ್ತು ಬಿಲ್‌ಗಳು ಪಾಸ್ ಆಗಬೇಕು. ಇವತ್ತು ನಾವು ಬಜೆಟ್‌ಗೆ ಉತ್ತರವನ್ನು ಕೊಡಬೇಕು. 29ನೇ ತಾರೀಖಿನವರೆಗೂ ಕಾರ್ಯಕಲಾಪಗಳ ಬಗ್ಗೆ ನೀವೇ ನಿಗದಿ ಮಾಡಿದಂತೆ ಆಗಿದೆ. ಅದಕ್ಕೋಸ್ಕರ ನೀವು ಎಷ್ಟೇ ಹೊತ್ತಾದರೂ ಮಾಡೋಣ. ಪಾರ್ಲಿಮಂಟ್‌ನಲ್ಲಿ ರಾತ್ರಿ 10 ಗಂಟೆಯವರೆಗೂ ಚರ್ಚೆ ಆಗಿಲ್ಲವೇ ನಾವು ಸಿದ್ಧವಿದ್ದೇವೆ. ಸನ್ಮಾನ್ಯ ವಿರೋಧಪಕ್ಷದ ನಾಯಕರಿಗೆ ನೋವು ಮಾಡಲು ನಾವ್ಯಾರು ಇಷ್ಟಪಡುವುದಿಲ್ಲ. ದಯಮಾಡಿ ತಮ್ಮಲ್ಲಿ ವಿನಂತಿ ಮಾಡುತ್ತೇನೆ. ತಾವು ಲೋಕಸಭೆಯ ಕಾರ್ಯದರ್ಶಿಯವರಿಗೆ ಪತ್ರವನ್ನು ಬರೆಯಿರಿ, ಅವರಿಂದ ಮಾಹಿತಿಗಳನ್ನು ತರಿಸಿಕೊಳ್ಳಿ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಏನು ಹಕ್ಕು, ಅಧಿಕಾರವಿದೆಯೆಂಬುದನ್ನು ನೋಡಿ. ಕೆಲವು ಕಡೆಗಳಲ್ಲಿ ನೀವು ಅಧಿಕಾರವನ್ನು ನಡೆಸುತ್ತಿದ್ದೀರಿ. ತಾವು ಎಲ್ಲಿ ಏನು ಅಧಿಕಾರವಿದೆಯೆಂಬ ಮಾಹಿತಿಯನ್ನು ತರಿಸಿಕೊಳ್ಳಿ. ಆ ಅಧಿಕಾರವನ್ನು

ನಡೆಸುತ್ತಿದ್ದೀರಿ. ಕೆಲವು ಕಡೆಗಳಲ್ಲಿ ನಾವು ಅಧಿಕಾರವನ್ನು ನಡೆಸುತ್ತಿದ್ದೇವೆ. ತಾವು ಎಲ್ಲಿ ಏನು ಅಧಿಕಾರವಿದೆಯೆಂಬ ಮಾಹಿತಿಯನ್ನು ತರಿಸಿಕೊಳ್ಳಿ. ಆ ಅಧಿಕಾರವನ್ನು ಕೊಡುವ ವಿಚಾರದಲ್ಲಿ ಇಲ್ಲವೆನ್ನುವುದಕ್ಕೆ ನಾನ್ಯಾರು? ನಿಮಗೆ ಸಂಪೂರ್ಣ ಅಧಿಕಾರವಿದೆ. ಯಾವ ರೂಲ್ಸ್ ಕಮಿಟಿ ಇದೆ. ಆ ರೂಲ್ಸ್ ಕಮಿಟಿಯಲ್ಲೆ ಚರ್ಚೆಯಾಗಿರುವಂಥಾದ್ದು. ಈ ರೂಲ್ಸ್ ಕಮಿಟಿಯಲ್ಲೇ ನೀವು ಕೊಟ್ಟಿರುವಂಥ ಸವಲತ್ತುಗಳಾಗಿವೆ. ನೀವು ಇನ್ಯಾವ ರೂಲ್ಸ್ ಕಮಿಟಿಗೆ refer ಮಾಡುತ್ತೀರಿ? ಆದುದರಿಂದ ದಯಮಾಡಿ ತಾವು ಲೋಕಸಭೆಯ ಕಾರ್ಯದರ್ಶಿಯವರಿಗೆ ಪತ್ರವನ್ನು ಬರೆದು, ಬೇರೆ ಬೇರೆ ರಾಜ್ಯಗಳಲ್ಲಿ ಏನು ವಾಡಿಕೆ ಇದೆಯೆಂಬುದು ಒಮ್ಮೆ ತೀರ್ಮಾನವಾಗಲಿ, ನಾವು ರೆಡಿ ಇದ್ದೇವೆ. ಈ ದೇಶದ ಎಲ್ಲಾ ರಾಜ್ಯಗಳಲ್ಲಿ ಪ್ರತಿ ಪಕ್ಷದ ನಾಯಕರಿಗೆ ಏನೇನು ಸವಲತ್ತುಗಳಿವೆ, ಅದು ಸವಲತ್ತಲ್ಲ, ಅಧಿಕಾರ ಇದು ಸಾಲುವುದಿಲ್ಲ. ಇಲ್ಲಿ ಸವಲತ್ತು ಎಂದರೆ ಕಾರು, ಮನೆಯಲ್ಲಿ. ಅವರು ಪದೇ ಪದೇ ನಮಗೆ ಸಿಕ್ಕಿರುವ ಸವಲತ್ತುಗಳನ್ನು ವಾಪಸ್ಸು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಇದರಲ್ಲಿ ಅರ್ಥ ಏನಿದೆ? ಇಲ್ಲಿ ನಾವು ಆ ಬಗ್ಗೆ ಚರ್ಚೆ ಮಾಡುತ್ತಿದ್ದೇವೆಯೇ? ಇಲ್ಲಿ ಚರ್ಚೆಯಾಗುತ್ತಿರುವಂಥಾದ್ದು ಮೇಲ್ಮನೆಯ ವಿರೋಧ ಪಕ್ಷದ ನಾಯಕರು, ನೀವು ಅಧಿಕಾರಿಗಳ ಸಭೆಯನ್ನು ಕರೆದು ಅಲ್ಲಿ ಏನು ಮಾಹಿತಿಗಳನ್ನು ಕೇಳುತ್ತೀರೋ, ಈ ಸಭೆಯನ್ನು ಕರೆಯುವುದಕ್ಕೆ ಇಲ್ಲಿ ಅವಕಾಶಗಳಿಲ್ಲ. ನಾವು ಅಲ್ಲಿಗೆ ಪ್ರತಿ ಪಕ್ಷದ ನಾಯಕರು ಹೋದಾಗ ಗೌರವದಿಂದ ಡೆಪ್ಯೂಟಿ ಕಮೀಷನರ್ ಮತ್ತೊಬ್ಬರು ಬಂದು ಮಾತನಾಡಿಸುವಂಥ ಪದ್ಧತಿ ಇದೆ. ನಾನು ಬಾಗಲಕೋಟೆಗೆ ಹೋಟಿಗೆ ಹೋಗಿದ್ದೆ, ಅಲ್ಲಿ ಡೆಪ್ಯೂಟಿ ಕಮೀಷನರ್‌ರವರು ನನಗೆ ಏನು ಹೇಳಿದರೆಂದರೆ, ಸಾರ್, ನಮ್ಮನ್ನು ಕರೆಯಬೇಡಿ. ನಮ್ಮನ್ನು ಮಾಹಿತಿ ಬೇಕೆಂದು ಕೇಳಬೇಡಿ, ನಮಗೆ ಆ ರೀತಿ ಅವಕಾಶಗಳಿಲ್ಲ. ನಾವು ಏನೋ ಗೌರವಕ್ಕೆ ಬರುತ್ತೇವೆ. ನೀವು ಅವರಿಲ್ಲ, ಇವರಿಲ್ಲ, ಅದು ಬೇಕು, ಇದು ಬೇಕೆಂದು ನಮ್ಮಲ್ಲಿ ಆ ರೀತಿ ಕೊಡುವುದಕ್ಕೆ ಅವಕಾಶವಿಲ್ಲ. ನಾಳೆ ನಾವು ಬರುವುದಿಲ್ಲವೆಂದು ನಿಮಗೆ ಅವಮಾನವಾಗುತ್ತದೆಂಬ ಮಾತನ್ನು ಹೇಳಿರುವಂಥಾದ್ದನ್ನು ನಾನು ಕೇಳಿದ್ದೇನೆ. ಸ್ವತಃ ಮಾನ್ಯ ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಒಬ್ಬ ಅಧಿಕಾರಿಯಿಂದ information ಬೇಕೆಂದು ತರಿಸಿಕೊಂಡಾಗ, ತತ್‌ಕ್ಷಣ ಈ ಸದನದಲ್ಲಿ ಗಂಟೆಗಟ್ಟಲೆ ಚರ್ಚೆಯಾಯಿತು.

ಆಗ ಮಾಹಿತಿಯನ್ನು ಕೊಡುವುದಿಲ್ಲವೆಂದು ಹೇಳಿದರು. ಆಗ ಇನ್ನು ಮಾಹಿತಿ ಕಾನೂನು ಇರಲಿಲ್ಲ. Right to Information ACT ಇರಲಿಲ್ಲ, ಈಗ ಅದನ್ನು ಮಾಡಿದ್ದೇವೆ. ಈ ಮಾಧ್ಯಮದ ಸ್ನೇಹಿತರು ಸೇರಿ, ಈ ಸದನದ ಸದಸ್ಯರು ಯಾರು ಬೇಕಾದರೂ ಮಾಹಿತಿಯನ್ನು ತೆಗೆದುಕೊಳ್ಳ ಬಹುದು. ಇವತ್ತು ನಮ್ಮ ಒಬ್ಬ ಸಾಮಾನ್ಯ ಶಾಸಕರಿಗೆ ಏನು ಅಧಿಕಾರ ಇದೆ, ಈ ವಿಷಯದಲ್ಲಿ ಅಷ್ಟೇ ಅಧಿಕಾರ ವಿರೋಧಪಕ್ಷದ ನಾಯಕರಿಗೂ ಇರುವಂಥಾದ್ದು. ಇದು ನಮ್ಮ rules & procedures ನಲ್ಲಿ ಬಹಳ ಸ್ಪಷ್ಟವಾಗಿದೆ, parliamentary System ನಲ್ಲಿ ಬಹಳ ಉತ್ತಮವಾದಂತಹ ವ್ಯವಸ್ಥೆ ಇದೆ, ಕೌಲ್ ಅಂಡ್ ಶೆಕ್ದರ್‌ರಂಥವರ decisions ಇವೆ. ಇದನ್ನು ಮಾನ್ಯ ಸಿದ್ದರಾಮಯ್ಯನವರು ಇನ್ನು ಹೆಚ್ಚು ಬೆಳೆಸಬಾರದು. ನಾವು ನಿಮ್ಮ ಜೊತೆಯಲ್ಲಿದ್ದೇವೆ. ನೀವು ನಮಗೆ ಮಾರ್ಗದರ್ಶನ ಮಾಡಿ. ನಾವು ಈ ಬಗ್ಗೆ ಚರ್ಚೆ ಮಾಡೋಣ. ಅದು ಬಿಟ್ಟು ಈ ರೀತಿ ಕಾಲಹರಣ ಮಾಡುವಂಥಾದ್ದನ್ನು ನಾವು ಸಹಿಸುವುದಿಲ್ಲ, ಮತ್ತೆ ನಮ್ಮೆಲ್ಲಾ ಸದಸ್ಯರ ಹಕ್ಕುಚ್ಯುತಿಯಾಗುತ್ತದೆ. ಇಲ್ಲಿ ಬಜೆಟ್ ಬಗ್ಗೆ, ನಾವು ಮಾಡಿರುವ ಒಳ್ಳೆಯ ಕೆಲಸಗಳ ಬಗ್ಗೆ, ಅಲ್ಲಿ ಆಗಿರುವ ವ್ಯತ್ಯಾಸಗಳ ಬಗ್ಗೆ, ನಮ್ಮ ಸದಸ್ಯರು ವಿಷಯ ಪ್ರಸ್ತಾಪ ಮಾಡುವುದಕ್ಕೆ ಸಿದ್ಧರಿದ್ದಾರೆ. ಆದುದರಿಂದ ಯಾರಾದರೂ ಒಬ್ಬರೂ ದಿವಸ ಗಟ್ಟಲೆ ಈ ರೀತಿ ಚರ್ಚೆ ಮಾಡುವ ಬಗ್ಗೆ ಮಾತನಾಡಲು ನಿಮ್ಮ ಕೊಠಡಿಗೆ ಬಂದಾಗ, ನೀವೊಂದು ತೀರ್ಮಾನ ಹೇಳಿದಿರಿ, that is enough. ಇಲ್ಲಿ ಹಿಗೆ ಆಗಬೇಕೆಂದು ಹೇಳುವಂಥಾದ್ದು democracy ಯಲ್ಲಿ ನಡೆಯುವುದಿಲ್ಲ, ಹೀಗೆ ಆಗಬಹುದೆಂದು ಸಲಹೆಯನ್ನು ಕೊಡಬಹುದು. ಇಲ್ಲ, ನಾವು ಸದನವನ್ನು ನಡೆಯುವುದಕ್ಕೇ ಬಿಡುವುದಿಲ್ಲವೆಂದರೆ, ಇದು ಎಷ್ಟರಮಟ್ಟಿಗೆ ಸರಿಯೆಂಬುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಅನುಭವವಿರುವಂಥವರು. ಅವರು ಯೋಚನೆ ಮಾಡಿ ಹೇಳಲಿ. ದಯಮಾಡಿ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಮುಖ್ಯಮಂತ್ರಿಯವರು ಹೊಸ ವಿಚಾರಗಳನ್ನು ಏನೂ ಹೇಳಲಿಲ್ಲ. ಅವರು ಮತ್ತೆ ಮತ್ತೆ ಅದೇ ವಿಷಯಗಳನ್ನು ಪ್ರತಿಪಾದನೆ ಮಾಡುತ್ತಿದ್ದಾರೆ. ನಾವು ಎದುರಿಗೆ ಏನು ಸಲಹೆ ಕೊಟ್ಟಿದ್ದು. ಇದನ್ನು ರೂಲ್ಸ್

ಕಮಿಟಿಗೆ refer ಮಾಡಿ, ರೂಲ್ಸ್ ಕಮಿಟಿಯಲ್ಲಿ ಯಾವ್ಯಾವ ರಾಜ್ಯಗಳಲ್ಲಿ ಏನೇನು ಇವೆಯೋ, ಅದನ್ನು ನೀವು ತರಿಸಿಕೊಳ್ಳಿ. ರೂಲ್ಸ್ ಕಮಿಟಿಯಲ್ಲಿ ನೀವೇ ಅಧ್ಯಕ್ಷರಾಗಿದ್ದೀರಿ, because you are the custodian of this House. You have to decide. ನಾವೆಲ್ಲರೂ ಆ ಕಡೆಯವರು, ಈ ಕಡೆಯವರು ಯಾವ ರೀತಿಯಲ್ಲಿ function ಮಾಡಬೇಕು. ಸರ್ಕಾರ ಹೇಗೆ ನಡೆದುಕೊಳ್ಳಬೇಕು, ನಾವು ಹೇಗೆ ನಡೆದುಕೊಳ್ಳಬೇಕು, ಏನು ಮಾಡಬೇಕೆನ್ನುವ ಬಗ್ಗೆ Rules Committee decides. You are heading the Committee. ಅದನ್ನು ಮಾಡಿಯೆಂದು ಹೇಳಿದರೆ ಅದಕ್ಕೆ ಅವರು ಒಪ್ಪಲು ತಯಾರಿಲ್ಲ. ಅದು ಇಲ್ಲವೆಂದರೆ privilege Committee ಗೆ refer ಮಾಡಿಯೆಂದರೆ ಅದಕ್ಕೂ ಒಪ್ಪಲು ತಯಾರಿಲ್ಲ. ನಾವು ನಮ್ಮ ಹಕ್ಕುಗಳ ಪ್ರತಿಪಾದನೆಯಾದರೆ ಆ ಕಡೆ ನಮಗೆ ಹಕ್ಕುಚ್ಯುತಿಯಾಗುತ್ತದೆಂದು ಹೇಳುವಂಥಾದ್ದು ಇದೆಯಲ್ಲಾ, ಇದು ಎಷ್ಟರಮಟ್ಟಿಗೆ ಸರಿ? ನಾನು ಇದನ್ನು ನಿಮ್ಮ ವಿವೇಚನೆಗೆ ಬಿಡುತ್ತೇನೆ. ನಾನು ಇದರ ಬಗ್ಗೆ ಹೆಚ್ಚು ಲಂಬಿಸುವುದಕ್ಕೆ ಹೋಗುವುದಿಲ್ಲ. ನಾನು ಈ ಸದನದಲ್ಲಿ ಬಹಳ ವರ್ಷಗಳಿಂದ ಕೆಲಸ ಮಾಡಿದ್ದೇನೆ. ಸರ್ಕಾರದಲ್ಲಿದ್ದುಕೊಂಡು ಕೆಲಸ ಮಾಡಿದ್ದೇನೆ, ವಿರೋಧ ಪಕ್ಷದಲ್ಲಿದ್ದುಕೊಂಡು ಕೆಲಸ ಮಾಡಿದ್ದೇನೆ. ಈ ರೀತಿ ಯಾವ ಸರ್ಕಾರಗಳು ನಡೆದುಕೊಂಡಿರಲಿಲ್ಲ. ಇವತ್ತು ಸರ್ಕಾರದವರು ಬಹಳ ಉದ್ಧಟತನದಿಂದ ನಡೆದುಕೊಳ್ಳುತ್ತಾರೆ. ನಾನು ಮಾನ್ಯ ಮುಖ್ಯಮಂತ್ರಿಯವರಿಂದ expect ಮಾಡಿದ್ದೆ, I expected from the Chief Minister. ಒಂದು ವೇಳೆ ಆ ರೀತಿ ಗೊಂದಲಗಳು ಇದ್ದರೆ, ನಿವಾರಣೆ ಮಾಡೋಣವೆಂದು ಮಾಡಬಹುದಾಗಿತ್ತು. He is not ready. ಇಲ್ಲಿ ಸತ್ಸಂಪ್ರದಾಯಗಳನ್ನು ಮಾಡುವುದಕ್ಕೋಸ್ಕರ ನಾವು ಇಲ್ಲಿಗೆ ಬಂದಿರುವುದು. ನಾವು ಇದೆಲ್ಲವನ್ನು 6 ಕೋಟಿ ಜನರು ಭಾವನೆಗಳನ್ನು ಪ್ರತಿನಿಧಿಸುವುದಕ್ಕೋಸ್ಕರ ಅವರಿಗೆ ಪರಿಹಾರ ಕಂಡುಹಿಡಿಯುವುದಕ್ಕೋಸ್ಕರ, ನಮಗೆ ಇದರ ಬಗ್ಗೆ ಕಾಳಜಿಯೇ ಹೊರತು ಕಾಲಹರಣ ಮಾಡುವುದಕ್ಕೋಸ್ಕರ ಇಲ್ಲಿಗೆ ನಾವು ಬರತಕ್ಕಂಥದಲ್ಲ. ನಮ್ಮನ್ನು ಜನ ಜವಾಬ್ದಾರಿಯಿಂದ ಕೆಲಸ ಮಾಡಿಯೆಂದು ಕಳುಹಿಸಿರತಕ್ಕಂಥದ್ದು. ಆ ಜವಾಬ್ದಾರಿಗಳು ನಮಗೆ ಗೊತ್ತಿವೆ. ನಾನು ಈಗ ಅದರ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರು ಮೊಂಡುತನ ಪ್ರದರ್ಶನ

ಮಾಡುತ್ತಿದ್ದಾರೆ. ಆದುದರಿಂದ ಇದನ್ನು ನಾವು ಜನರಿಗೆ ಬಿಡುತ್ತಿದ್ದೇವೆ. ಸಾರ್ವಜನಿಕರು ಏನು ಮಾಡುತ್ತಾರೆ ಎಂದು ನೋಡೋಣ. ನಾವು ಸಾರ್ವಜನಿಕರ ಮುಂದೆ ಹೋಗಿ ಹೇಳೋಣ. ನಾವು ಕೂಡ, we are going to the people and tell them. ಈ ಸರ್ಕಾರ ಹೇಗೆ ನಡೆದುಕೊಳ್ಳುತ್ತಿದೆ, ಏನೇನು ಮಾಡುತ್ತಿದೆ ಎನ್ನುವುದನ್ನು ಜನರ ಮುಂದೆ ಹೇಳುತ್ತೇವೆ. ಮಾನ್ಯ ಅಧ್ಯಕ್ಷರೆ, ನಾನು ತಮಗೆ ಒಂದು ನೋಟೀಸ್ ಕೊಟ್ಟಿದ್ದೇನೆ. ಇದೆ ಬಗ್ಗೆಯೂ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ನಿಮ್ಮ ಅನುಮತಿ ಕೇಳುವುದಕ್ಕೋಸ್ಕರ ನಾನು ಈಗ ನಿಂತಿದ್ದೇನೆ. ರೂಲ್ಸ್ 191 ರಲ್ಲಿ ನಾನು ಅನುಮತಿ ಕೇಳಿದ್ದೇನೆ ಆ ವಿಚಾರವೇನೆಂದರೆ ಈ ರೀತಿಯ ಒಂದು circular ದಿನಾಂಕ: 25.6.2009 ರಂದು ತಂದಿರತಕ್ಕಂಥದ್ದು. ಅದರಿಂದ ವಿರೋಧ ಪಕ್ಷದ ನಾಯಕರ ಹಕ್ಕುಗಳಿಗಷ್ಟೇ ಚ್ಯುತಿಯಾಗುವುದಿಲ್ಲ, ಎಲ್ಲ ಸದಸ್ಯರ ಹಕ್ಕುಗಳಿಗೂ ಕೂಡ ಚ್ಯುತಿಯಾಗುತ್ತದೆ. ವಿರೋಧ ಪಕ್ಷಗಳವರು ಅಧಿಕಾರಿಗಳ ಜೊತೆ ಮಾತನ್ನೆ ಆಡಬೇಡಿ, ಅವರ ಜೊತೆ ಚರ್ಚೆಯನ್ನೆ ಮಾಡಬೇಡಿ ಅನ್ನತಕ್ಕಂಥಾದ್ದು ಕೂಡ ಆಗಿದ್ದು, ಅದರಿಂದ exective interference ಆಗುತ್ತದೆ, ruling party ಯವರು ಮಾತ್ರ ಅಧಿಕಾರಿಗಳ ಜೊತೆ ಮಾತನಾಡಬೇಕು, merely because you are in to the Opposition, don't talk to them, don't get the information. Right to Information ACT ಬಂದದ್ದು ಇತ್ತೀಚೆಗೆ. ಮೊದಲು Right to Information Act ಇರಲಿಲ್ಲ. ಅದನ್ನು ಮೊದಲು ಕೇಂದ್ರದಲ್ಲಿದ U.P.A. ಸರ್ಕಾರ ಮಾಡಿತು, ಆಮೇಲೆ ಇಲ್ಲೂ ಮಾಡಿಕೊಂಡಿದ್ದೇವೆ. Even in the absence of the Right to Information ACT, every citizen of the country under the Constitution has got every right to know what is going on in the Government. How programmes are implementing? What is going on? How Government functions? ಇವುಗಳನ್ನೆಲ್ಲ ತಿಳಿದುಕೊಳ್ಳಲಿಕ್ಕೆ ಅವಕಾಶವಿದೆ. ಅರ್ಜಿಯನ್ನೇ ಕೊಟ್ಟು, ದುಡ್ಡು ಕೊಟ್ಟುಬಿಟ್ಟೇ ಮಾಹಿತಿಯನ್ನು ತೆಗೆದುಕೊಳ್ಳಬೇಕು ಎಂದೇನೂ ಇಲ್ಲ. It is the duty of the Government, it is an obligation on the part of the Government. Because, ಜನ ಅವರಿಗೆ ಓಟು ಕೊಟ್ಟಿದ್ದು, ನೀವು

majority ಇದ್ದೀರಿ, ಅದಕ್ಕಾಗಿ ನೀವು ಅಧಿಕಾರ ಮಾಡಿ ಎಂದು ಹೇಳಿದ್ದಾರೆ. ಅದರ ಬಗ್ಗೆ ನಾನು ಬಹಳ ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. It amounts to breach of privilege. ಇದು ಇತ್ತೀಚೆಗೆ ನಡೆದಿರತಕ್ಕಂಥಾದ್ದು, ಇಡೀ ರಾಜ್ಯಕ್ಕೆ ಸಂಬಂಧಪಟ್ಟಂಥಾದ್ದು. Leader of the Opposition ಎಂದ ಮೇಲೆ ನಮಗೂ ಕೂಡ ಜವಾಬ್ದಾರಿಗಳಿವೆ. ಇಲ್ಲಿ Leader of the Opposition ಆಗಿ ಕೆಲಸ ಮಾಡುವಾಗ ನಾವು ಜನರ ಹಿತವನ್ನು ಕಾಪಾಡಬೇಕು ಎನ್ನತಕ್ಕಂಥಾದ್ದು ಕೂಡ ಜನರ ನಿರೀಕ್ಷೆಯಾಗಿರುತ್ತದೆ, ಬಯಕೆಯಾಗಿರುತ್ತದೆ. ಅದಕ್ಕೋಸ್ಕರವಾಗಿ, ನಮಗೆ ಇಲ್ಲಿರತಕ್ಕಂಥ ಹಕ್ಕುಗಳು ಮೊಟಕಾದರೆ, ಅದಕ್ಕೆ ರಕ್ಷಣೆ ಕೊಡಲಿಕ್ಕೋಸ್ಕರ ವಾಗಿಯೇ ನಾವು ಇಲ್ಲಿ ನಿಯಮಾವಳಿಗಳನ್ನು ಎಲ್ಲಾ ಮಾಡಿಕೊಂಡಿರುವುದು. ನಿಯಮಾವಳಿಗಳ ಪ್ರಕಾರ ನಾವು ಏನೇನು privilege ಗಳನ್ನು ಕೊಟ್ಟಿದ್ದೇವೆ, ಆ privilege ಗಳಿಗೆ ಯಾವತ್ತೂ ಕೂಡ ಚ್ಯುತಿಯಾಗಬಾರದು. ಆ ಚ್ಯುತಿಯಾಗದ ರೀತಿಯಲ್ಲಿ ರಕ್ಷಣೆಯಾಗಬೇಕು. ವಿರೋಧ ಪಕ್ಷಗಳವರು ಸ್ವತಂತ್ರ್ಯವಾಗಿ ತಮ್ಮ ಅಭಿಪ್ರಾಯಗಳನ್ನು ಹೇಳಬೇಕು, ಅವರಿಗೆ ಇರತಕ್ಕಂಥ ಹಕ್ಕುಗಳನ್ನು ಚಲಾಯಿಸಲಿಕ್ಕೆ ಸರ್ಕಾರದ ವತಿಯಿಂದ ಯಾವುದೇ ಅಡೆತಡೆಗಳು ಬರಬಾರದು. ಇವೆಲ್ಲವು ಕೂಡ ಆಗಬೇಕು. Because I am statutorily recognized under the law, under the Constitution ಮತ್ತು ನೀವೂ ಕೂಡ ನಿಯಮಾವಳಿಗಳ ಪ್ರಕಾರವಾಗಿ ನನ್ನನ್ನು Leader of the Opposition ಎಂದು ಮನ್ನಣೆ ಮಾಡಿದ್ದೀರಿ. ಕಾನೂನು ಮಾಡಿ, Leader of the Opposition ಏಕೆ ಈ ಎಲ್ಲಾ ಸವಲತ್ತುಗಳನ್ನು ಕೊಟ್ಟಿದ್ದಾರೆ ಎಂದರೆ, ಕೇಂದ್ರದಲ್ಲೂ ಕಾನೂನು ಮಾಡಿದ್ದಾರೆ, ಈ ರಾಜ್ಯದಲ್ಲೂ ಕಾನೂನು ಮಾಡಿದ್ದೇವೆ. ಅಲ್ಲಿ 1977 ರಲ್ಲಿ ಆಗಿದೆ, ಇಲ್ಲಿ 1976 ರಲ್ಲಿ ACT ಆಗಿದೆ. ಅದಕ್ಕೂ ಮೊದಲು ACT ಇರಲಿಲ್ಲ, ಕಾನೂನೇ ಇರಲಿಲ್ಲ. ಕಾನೂನು ಬಂದ ಮೇಲೆ ಈ ಎಲ್ಲಾ ಸವಲತ್ತುಗಳನ್ನು ಕೇಳುವುದಕ್ಕೆ ಇಲ್ಲಿ ನಿಂತಿಲ್ಲ. ಆದರೆ ನಮ್ಮ ಹಕ್ಕಿಗೆ ಚ್ಯುತಿಯಾಗದ ರೀತಿಯಲ್ಲಿ ಸರ್ಕಾರ ನಡೆದುಕೊಳ್ಳಬೇಕು. ಇಲ್ಲಿ ಆ ರೀತಿಯಲ್ಲಿ ನಮ್ಮ ರಕ್ಷಣೆಯಾಗಬೇಕು. ಅದಕ್ಕೋಸ್ಕರವಾಗಿಯೇ ತಮಗೆ ಇದರ ಬಗ್ಗೆ notice ಅನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ನಾನು preliminary submission ಮಾಡುತ್ತೇನೆ, ದಯಮಾಡಿ ಅನುಮತಿ ಕೊಡಿ ಎಂದು ನಿಮ್ಮ

ಅನುಮತಿಗೋಸ್ಕರವಾಗಿ ಕೇಳುತ್ತಿದ್ದೇನೆ. I hope that I am clear on this point. ನೀವು convince ಆಗಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ನಮಗೆ ತಾವು ಅನುಮತಿಯನ್ನು ಕೊಡಬೇಕು. ಅನುಮತಿ ಕೊಟ್ಟಮೇಲೆ ಎಲ್ಲ ವಿಚಾರಗಳನ್ನು ನಾನು ಪ್ರಸ್ತಾಪ ಮಾಡುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ಸನ್ಮಾನ್ಯ ಅಧ್ಯಕ್ಷರೆ, ಪ್ರತಿಪಕ್ಷದ ನಾಯಕರು ಇವತ್ತು ಒಂದು ಹಕ್ಕುಚ್ಯುತಿಯ ಒಂದು ಪ್ರಸ್ತಾವನೆಯನ್ನು ತಮ್ಮ ಮುಂದೆ ಇಟ್ಟಿದ್ದಾರೆ. ದಿನಾಂಕ 26-6-2009ರ ಸುತ್ತೋಲೆ ಏನಿದೆ, ಅದರಿಂದ ನನ್ನದು ಮಾತ್ರವಲ್ಲ, ಪ್ರತಿಯೊಬ್ಬ ಸದಸ್ಯನ ಹಕ್ಕಿಗೂ ಚ್ಯುತಿಯಾಗಿದೆ ಎಂದು ಹೇಳಿದ್ದಾರೆ. ಚ್ಯುತಿಯಾದಾಗ ಹಕ್ಕುಚ್ಯುತಿಯ ಪ್ರಶ್ನೆ ಬರುತ್ತದೆ. ನಾನು ತಮ್ಮ ಗಮನಕ್ಕೆ ಸನ್ಮಾನ್ಯ ಸಭಾಧ್ಯಕ್ಷರ ಒಂದು rulling ಅನ್ನು ತರುತ್ತೇನೆ. I think that is more than sufficient. "Parliamentary privilege extends only to parliamentary proceedings and not beyond" ಈ ಸದನದಲ್ಲಿ ಏನು ನಡೆಯುತ್ತದೆ. ಅಂದರೆ ಪ್ರಶ್ನೆಗಳನ್ನು ಕೇಳುವುದು, ಉತ್ತರಗಳನ್ನು ಪಡೆಯುವುದು, ಆ ರೀತಿ ಪ್ರಶ್ನೆಗಳನ್ನು ಕೇಳುವ ಹಕ್ಕಿಗೆ ಏನಾದರೂ ಚ್ಯುತಿಯಾದಾಗ ಹಕ್ಕುಚ್ಯುತಿಯ ಪ್ರಶ್ನೆ ಬರುತ್ತದೆ. ನಾನು main portion ಅನ್ನು ಮಾತ್ರ ಓದುತ್ತೇನೆ. "The question of parliamentary privilege has to be kept clear from courtesies or party alignments. Parliamentary privilege extends only to parliamentary proceedings and not beyond" parliamentary proceedings ಎಂದರೆ ಇಲ್ಲಿ legislative proceedings ಆಗುತ್ತದೆ. ಇದು federal structure. ಈ Houseನಲ್ಲಿ ಈ ಸದನಕ್ಕೆ ಸಂಬಂಧಪಟ್ಟ ವಿಷಯಗಳೇನಿವೆ, ವಿದ್ಯಮಾನಗಳೇನಿವೆ, "parliamentary privilege extends only to parliamentary proceedings and beyond. While a member is functioning...." ಇದು ಬಹಳ ಮುಖ್ಯ, "...While a member is functioning within the precincts of this House...." ಹಿಂದೆ ಸಂಪಂಗಿಯವರ ಪ್ರಕರಣ ಬಂದಾಗಲೂ ಕೂಡ ತಮ್ಮ ವ್ಯಾಪ್ತಿ ಎಲ್ಲಿ ಎನ್ನುವ ಒಂದು ಪ್ರಶ್ನೆ ಬಂತು, ವ್ಯಾಪ್ತಿ L.H. ಗೂ ತಲುಪುತ್ತದೋ, ಇಲ್ಲಿ ಮಾತ್ರವೋ ಎನ್ನುವ ಒಂದು ಚರ್ಚೆ ಬಂತು. That is a different thing.

ಶ್ರೀ ಎನ್.ಸಂಪಂಗಿ : ಸಂಪಂಗಿಯವರು ಎಂದು ಹೇಳಿದಾಗ ಅವರು ಯಾವ ಪಕ್ಷದವರು ಎನ್ನುವುದನ್ನು ನೀವು ಹೇಳಬೇಕು. ಏಕೆಂದರೆ ತಪ್ಪು ಮಾಹಿತಿ ಹೋಗುತ್ತದೆ. ಬಿ.ಜೆ.ಪಿ. ಪಕ್ಷದವರು ಎಂದು ಹೇಳಬೇಕು.

ಶ್ರೀ ಎಸ್.ಸುರೇಶ್‌ಕುಮಾರ್ : ಸಂಪಂಗಿ ಎಂದು ನಾನು ಹೇಳಿದಂಥಾದ್ದು ತಾವಲ್ಲ.

ಶ್ರೀ ಎನ್.ಸಂಪಂಗಿ : ಕೆ.ಜಿ.ಎಫ್. ಕ್ಷೇತ್ರದ ಸಂಪಂಗಿಯವರು ಎಂದು ಹೇಳಿ.

ಶ್ರೀ ಎಸ್.ಸುರೇಶ್‌ಕುಮಾರ್ : ಆಯಿತು, O.K."…. While a member is functioning within the precincts of this House, during the sittings, he is undoubtedly acting in the discharge if his duties as a member and subject to other relevant factors he has got a privilege." ಒಂದು ಹಕ್ಕು ಇದೆ. ಈ ಸದನದಲ್ಲಿ ವಿಧಾನ ಮಂಡಲದ, ವಿಧಾನಸಭೆಯ ಸದಸ್ಯನಾಗಿ ಸಭಾಧ್ಯಕ್ಷರ ಮುಂದೆ ಈ ಒಂದು ಸದನದಲ್ಲಿ ಭಾಗವಹಿಸುತ್ತಿರುವಾಗ ಒಂದು privilege ಇದೆ. ಆ privilege ಅಡಿಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. "It is a privilege of a memder to put question, criticize the Government, bring motions before the House and participate in debate in the House, but outside the scope of such proceedings…" ಅದು ಎಂದು ನಾನು ಹೇಳುವುದಿಲ್ಲ. ಇದು ಅದರ ಒಳಗಡೆಯೇ ಬರುತ್ತದೆ."…. but outside the scope of such proceedings to ask for concession to be made by the Government cannot be said to be in discharge of his duties as a member of the Legislature nor gas the matter come up even till now before the House nor is it said that…." ಎಂದೆಲ್ಲಾ ಬರುತ್ತದೆ. ಅದು a breach of an engagement. ಈ ಕಾರಣದಿಂದ ಖಂಡಿತಾ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಅಥವಾ ಈ ಸದನದ ಯಾವುದೇ ಸದಸ್ಯರು ಸದನದಲ್ಲಿ, ವಿಧಾನ ಮಂಡಲದಲ್ಲಿ ಸದಸ್ಯರಾಗಿರುವಾಗ ಇರುವ ಹಕ್ಕನ್ನು ಯಾರಾದರೂ ಚ್ಯುತಿಗೊಳಿಸಿದರೆ, ಅದಕ್ಕೆ ಅಡ್ಡಿ ಮಾಡಿದರೆ ಅದು ಹಕ್ಕುಚ್ಯುತಿಯಾಗುತ್ತದೆಯೇ ಹೊರತು, beyond the scope and beyond the limits of this precincts of this House, ಅಂದರೆ ಈ ಒಂದು ಸದನದ ವ್ಯಾಪ್ತಿಗೆ

ಮೀರಿದ ಸಂಗತಿಯಲ್ಲಿ ಯಾವುದೇ ಕಾರಣಕ್ಕೆ breach of privilege ಆಗುವುದಿಲ್ಲ, ಹಕ್ಕುಚ್ಯುತಿಯಾಗುವುದಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ನಾನು ತರುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಸಂಸದೀಯ ಸಚಿವರು ಹಕ್ಕುಚ್ಯುತಿ ಯಾಗುವುದಿಲ್ಲ ಎಂದು ಹೇಳುತ್ತಾರೆ. ಹೇಗೆ ಆಗುತ್ತದೆ ಎನ್ನುವುದನ್ನು ನಾನು explain ಮಾಡಿ ಹೇಳುತ್ತೇನೆ. ಆ ಮೇಲೆ ಅದನ್ನು privilege Committee ಗೆ refer ಮಾಡುವುದನ್ನು ನಿಮ್ಮ decision ಗೆ ನಾವು ಬಿಡುತ್ತೇವೆ. ನೀವು ನನಗೆ ಅನುಮತಿ ಕೊಡಬೇಕು. ನಿಮ್ಮ ಅನುಮತಿಗೋಸ್ಕರವಾಗಿ ಕೇಳುತ್ತಿದ್ದೇವೆ.

ಅಧ್ಯಕ್ಷರು : ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಹಕ್ಕುಚ್ಯುತಿ ಬಗ್ಗೆ ವಿಷಯವನ್ನು ಪ್ರಸ್ತಾಪ ಮಾಡಿ, ಅದರ, ಬಗ್ಗೆ ಸಾಕಷ್ಟು ವಿವರಗಳನ್ನು ಕೊಟ್ಟಿದ್ದಾರೆ ಮತ್ತು ಮಾನ್ಯ ಕಾನೂನು ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳೂ ಸಹ ಅದರ ಬಗ್ಗೆ ಸರ್ಕಾರದ ನಿಲುವೇನು ಎನ್ನುವಂಥಾದ್ದನ್ನು ತಿಳಿಸಿದ್ದಾರೆ. ಹಾಗೆಯೇ, ಮಾನ್ಯ ರೇವಣ್ಣನವರು ಮತ್ತು ಮಾನ್ಯ ಜಯಚಂದ್ರರವರು ಕೂಡ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಚರ್ಚೆಯಾದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರ ಸ್ಥಾನಮಾನಗಳ ಬಗ್ಗೆ ಅಧಿಕಾರದ ಬಗ್ಗೆ ಸಲಹೆಯನ್ನು ಕೊಟ್ಟರು. ಏಕೆಂದರೆ ಇದು ಕೇವಲ ನಮ್ಮ ಕರ್ನಾಟಕ ವಿಧಾನಸಭೆಗೆ ಮಾತ್ರ ಸೀಮಿತವಲ್ಲ, ಇಡೀ ರಾಷ್ಟ್ರದಲ್ಲಿರುವ ಬೇರೆ ಬೇರೆ ರಾಜ್ಯಗಳಲ್ಲಿ ವಿರೋಧ ಪಕ್ಷದ ನಾಯಕರ ಸ್ಥಾನಮಾನಗಳೇನಿದೆ ಮತ್ತು ಲೋಕಸಭೆಯಲ್ಲಿ. ಹಾಗೂ ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರ ಸ್ಥಾನಮಾನ ಮತ್ತು ಅಧಿಕಾರ ವ್ಯಾಪ್ತಿ ಏನಿದೆ ಎನ್ನುವ ಮಾಹಿತಿಯನ್ನು ತಿಳಿದುಕೊಳ್ಳಬೇಕು ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು reference ಮಾಡಿದರು. ಹೀಗಾಗಿ ನಾನು ಈ ವಿಷಯಕ್ಕೆ ಸಂಬಂಧಪಟ್ಟಂತೆ ಮತ್ತು ಮಾನ್ಯ ವಿರೋಧ ಪಕ್ಷಗಳ ನಾಯಕರ ಸ್ಥಾನಮಾನ ಮತ್ತು ಅವರ ಅಧಿಕಾರ ವ್ಯಾಪ್ತಿಯ ಕುರಿತು ಇವತ್ತು ಲೋಕಸಭೆಯ ಸ್ಪೀಕರ್‌ರವರಿಗೆ ಮತ್ತು ಅಲ್ಲಿನ ಕಾರ್ಯದರ್ಶಿಯವರಿಗೆ reference ಮಾಡಿ ಅಲ್ಲಿಂದ ಮಾಹಿತಿಗಳನ್ನು ತರಿಸಿಕೊಳ್ಳುವಂಥಾದ್ದು ಮತ್ತು ಅದರ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲುವಂಥ ಕೆಲಸವನ್ನು ನಾನು ಮಾಡುತ್ತೇನೆ ಎನ್ನುವಂಥಾದ್ದನ್ನು ಈ ಸಂದರ್ಭದಲ್ಲಿ ಈ

ಸದನದ ಗಮನಕ್ಕೆ ತೆಗೆದುಕೊಂಡು ಬರುತ್ತೇನೆ. ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಇವತ್ತು ಇದೇ ವಿಷಯಕ್ಕೆ ಸಂಬಂಧ ಪಟ್ಟಂತೆ ರಾಜ್ಯ ಸರ್ಕಾರ ಹೊರಡಿಸಿರುವ circular ನಿಂದ, ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಸದಸ್ಯರ ಹಕ್ಕುಚ್ಯುತಿಯಾಗಿದೆ ಎನ್ನುವಂಥ ಪ್ರಸ್ತಾಪವನ್ನು ಏನು ಮಾಡಿದರು, ಅವರ ಬಗ್ಗೆ ನಿಯಮಾವಳಿಗಳಡಿಯಲ್ಲಿ ನೋಟೀಸ್ ಅನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ವಿಷಯವನ್ನು ಮಂಡಲನೆ ಮಾಡಿದ್ದಾರೆ. ಕಾನೂನು ಸಚಿವರಾದ ಮಾನ್ಯ ಸುರೇಶ್‌ಕಮಾರ್‌ರವರು ಅದರ ಬಗ್ಗೆ ಸರ್ಕಾರದ ನಿಲುವೇನು ಎನ್ನತಕ್ಕಂಥಾದ್ದನ್ನು ತಿಳಿಸಿದ್ದಾರೆ. ಹೀಗಾಗಿ, ಈ ಎಲ್ಲ ವಿಷಯಗಳ ಬಗ್ಗೆ ನಾನು ಕೂಲಂಕುಷವಾಗಿ ಅಧ್ಯಯನ ಮಾಡಿಕೊಂಡು ಇದೆ ಬಗ್ಗೆ ತೀರ್ಪನ್ನು ಕೊಡುತ್ತೇನೆ. ಈಗ ನಾನು ತೀರ್ಪನ್ನು ಕಾಯ್ದಿರಿಸಿದ್ದೇನೆ. ಈ ಅಧಿವೇಶನ ಮುಗಿಯುವುದರೊಳಗಾಗಿ ನಾನು ನನ್ನ ತೀರ್ಪನ್ನು ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ನಾನು ನಿಮ್ಮ ತೀರ್ಪನ್ನು ಪ್ರಶ್ನೆ ಮಾಡುವುದಿಲ್ಲ.

ಅಧ್ಯಕ್ಷರು : ನೀವು ಅದರ ಬಗ್ಗೆ ಈಗ discussion ಮಾಡುವುದು ಮಾಡುತ್ತೀರಿ, ಅವರು ಇದಕ್ಕೆ reference ಮಾಡಬೇಕು. ಆದ್ದರಿಂದ ಆ ಮೇಲೆ ಅದರ ಬಗ್ಗೆ ನಾನು ತೀರ್ಮಾನ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ನಿನ್ನೆ ನಾನು ಬಹಳ ದೀರ್ಘವಾಗಿ ಅನೇಕ ವಿಚಾರಗಳನ್ನು Leader of Opposition, in the spirit of Parliamentary democracy, ಅವರ ಸ್ಥಾನಮಾನಗಳೇನು ಅದೆಲ್ಲದರ ಬಗ್ಗೆ ಪ್ರಸ್ತಾಪಿಸಿದ್ದೇನೆ. Rule ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : ಈಗಾಗಲೇ ಅದರ ಬಗ್ಗೆ ಸಾಕಷ್ಟು ವಿಷಯಗಳನ್ನು ಚರ್ಚೆ ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ : ಹೌದು, ಚರ್ಚೆಯಾಗಿದೆ. ನಿಯಮ 191ರ ಅಡಿಯಲ್ಲಿ ಚರ್ಚೆ ಮಾಡಲು ನಾವು ನೋಟೀಸ್ ಕೊಟ್ಟಿದ್ದೇವೆ. ಅನುಮತಿ ಕೊಟ್ಟಿದ್ದೀರೋ, ಇಲ್ಲವೋ? ನೀವು ಅನುಮತಿ ನಿರಾಕರಣೆ ಮಾಡಿದ್ದೀರಾ?

ಅಧ್ಯಕ್ಷರು : ಅದಕ್ಕೆ ನಾನು ತೀರ್ಮ ಕೊಡುತ್ತೇನೆಂದು ಹೇಳಿದ್ದು.

ಶ್ರೀ ಸಿದ್ದರಾಮಯ್ಯ : ನಿರಾಕರಣೆ ಮಾಡುವುದಕ್ಕೆ, ತೀರ್ಪಲ್ಲ. ಈ ವಿಷಯವನ್ನು Privilege Committee ಗೆ ವಹಿಸಬೇಕೋ, ಬೇಡವೋ ಎನ್ನುವುದರ ಬಗ್ಗೆ ತೀರ್ಪನ್ನು ಕಾಯ್ದಿರಿಸಿಕೊಳ್ಳಿ.

ಅಧ್ಯಕ್ಷರು : ನಾನು over all ಆಗಿ ಆ ಬಗ್ಗೆ Ruling ಕೊಡುತ್ತೇನೆ.

ಡಾ: ಹೆಚ್.ಸಿ.ಮಹಾದೇವಪ್ಪ : ಈ ವಿಷಯದ Submission ಗೆ ನೀವು ಅನುಮತಿ ಕೊಡಿ. ಆ ಮೇಲೆ, ತಮ್ಮ ತೀರ್ಪನ್ನು ಹೇಳಿ.

ಶ್ರೀ ಸಿದ್ದರಾಮಯ್ಯ : Submission ಗೇ ಅನುಮತಿ ಕೊಡದೇ, ತೀರ್ಪು ಕಾಯ್ದಿರಿಸಿದೆ ಎಂದರೆ ಹೇಗೆ?

ಅಧ್ಯಕ್ಷರು : ಮಹಾದೇವಪ್ಪನವರೆ, ನಿನ್ನೆಯಿಂದ ಇವತ್ತಿನವರೆಗೆ ಚರ್ಚೆ ಮಾಡಿರುವುದು ಅದೇ ಹಿನ್ನೆಲೆಯಲ್ಲಿ. ಅದೇ ವಿಷಯವೇ ಚರ್ಚೆಯಾಗಿದೆ. That Subject will be discussed again.

SRI SIDDARAMAIAH : It is a different notice under different provision .

ಅಧ್ಯಕ್ಷರು : Correct. ನಿನ್ನೆ ತಾವು ಮಾತನಾಡಿದ್ದು, ಮಹಾದೇವಪ್ಪನವರು refer ಮಾಡಿದ್ದು ಈ ವಿಷಯವನ್ನು ಹಕ್ಕುಚ್ಯುತಿ ಸಮಿತಿಗೆ ಮಾಡಿದ್ದೀರಿ. ಮತ್ತೆ ಅದೇ ವಿಷಯವನ್ನು ಪ್ರಸ್ತಾಪಿಸಿದರೆ ಹೇಗೆ? ಆ ಬಗ್ಗೆ ನಂತರ ತೀರ್ಪು ಕೊಡುತ್ತೇನೆಂದು ಹೇಳಿದೆನಲ್ಲ?

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಹಾಗಾದರೆ, ನಮ್ಮ ಹಕ್ಕುಗಳನ್ನು ಯಾರು ರಕ್ಷಣೆ ಮಾಡುವವರು?

ಅಧ್ಯಕ್ಷರು : ಅದರ ಬಗ್ಗೆ ನಾನು ತೀರ್ಪು ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಇಲ್ಲೇನಾಗಿದೆ ಎಂದರೆ, ಇವರು Rules and Reguations ಗಳನ್ನು ಹೇಳುತ್ತಾ ಕುಳಿತುಕೊಂಡು, ವಿರೋಧ ಪಕ್ಷದ ನಾಯಕರ ಬಾಯಿ ಮುಚ್ಚಿಸಲಿಕ್ಕೆ, ವಿರೋಧ ಪಕ್ಷದವರ ಬಾಯಿ ಮುಚ್ಚಿಸಲಿಕ್ಕೆ ಮಾಡತಕ್ಕಂಥ ಪ್ರಯತ್ನವಿದೆಯಲ್ಲಾ, it is not correct. ನಾನು ಈಗ ಅವರ ಗಮನಕ್ಕೆ ತರುತ್ತೇನೆ. ಆ ಮೇಲೆ, ನೀವೇನಾದರೂ ತೀರ್ಮಾನ ಮಾಡಿ. Kaul and Shakdharನಲ್ಲಿ "The page committee recommended that the Leader of the largest recognized opposition party (whether a regular party or a party composed of different parties or groups)..."Not only single party. Group ಗಳಿದ್ದರೂ ಆಗಬಹುದು ಎಂದು ಹೇಳುತ್ತಾರೆ. ಇಲ್ಲಿ, we have got majority. ನಾವು single largest minority party. ಜೆ.ಡಿ. (ಎಸ್)ನವರು ಎರಡನೇ ಸ್ಥಾನದಲ್ಲಿ ಬರುತ್ತಾರೆ. Rulesನಲ್ಲಿ ಹೇಳಿರುವುದಕ್ಕಿಂತ ನಾವು ಜಾಸ್ತಿ ಜನ ಸದಸ್ಯರಿದ್ದೇವೆ.

ಹಾಗಾಗಿ, ನೀವು ನಮಗೆ recognize ಮಾಡಿ, ಕಾನೂನು ಪ್ರಕಾರ Leader of the Opposition ಸ್ಥಾನ ಕೊಟ್ಟಿದ್ದೀರಿ. "...should be recognixed as the Leader of the opposition. According to the committee, it would be a healthy parliamentary convention if the Leader of the opposition is invited by the Chief Minister before the latter makes any policy statements in the House and is given a copy of the statement in advance, and his suggestions for fixing any particular business on a particular day the Leader of the House." ಇವರು ಇಷ್ಟೆಲ್ಲಾ ಮಾಡುತ್ತಾರೆಂದು ನಮಗೆ ನಿರೀಕ್ಷೆ ಇಲ್ಲ. ಆದರೆ, ಮಾಡಬೇಕು. ಪ್ರಜಾಪ್ರಭುತ್ವಕ್ಕಾಗುವುದಿಲ್ಲ. ಇದು healthy practice. ಇವರಿಂದ ನಾವೇನೂ ನಿರೀಕ್ಷೆ ಮಾಡುವುದಕ್ಕಾಗುವುದಿಲ್ಲ. ಇದರ ಪ್ರಕಾರ, ನಾವು 10 ಜನ ಸಹಿ ಮಾಡಿ ನೋಟೀಸ್ ಕೊಟ್ಟಿದ್ದೇವೆ. Rules ಪ್ರಕಾರ 10 ಜನ ನಾವು ಎದ್ದು ನಿಂತು ಕೊಂಡರೆ, ಚರ್ಚೆ ಮಾಡಲಿಕ್ಕೆ ನಮಗೆ ಅವಕಾಶ ಕೊಡುಬೇಕೆಂದಿದೆ. Please, ಇದನ್ನೆಲ್ಲ ನೀವು ನೋಡಿ ನಮಗೆ ಅವಕಾಶ ಕೊಡಬೇಕು.

ಅಧ್ಯಕ್ಷರು : ಆ ಬಗ್ಗೆ ಚರ್ಚೆ ಮಾಡಲಿಕ್ಕೆ ನೀವು ನಮಗೆ ಅವಕಾಶ ವಿದೆಯೇ, ಇಲ್ಲವೇ ಎನ್ನುವ ಬಗ್ಗೆ ನಾನು ನೋಡಿ ತೀರ್ಮ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಚರ್ಚೆ ಮಾಡುವುದಕ್ಕೆ ನೀವು ನಮಗೆ ಅವಕಾಶ ಮಾಡಿಕೊಡಿ. ಚರ್ಚೆ ಮಾಡೋಣ. ಆ ಮೇಲೆ, ನೀವು ಏನಾದರೂ ತೀರ್ಮ ಕೊಡಿ. Whatever decision you take, we will respect your decision. ನಾವು Rules ಪ್ರಕಾರ ಹೋಗುತ್ತಿದ್ದೇವಷ್ಟೇ.

ಅಧ್ಯಕ್ಷರು : Technical ಆಗಿ...

ಶ್ರೀ ಸಿದ್ದರಾಮಯ್ಯ : ನಾವು Rules ಪ್ರಕಾರ ಹೋಗುತ್ತಿದ್ದೇವೆ. ಅವರು Rules ಇಲ್ಲದೇ ಏನೂ ಇಲ್ಲದೆ, they are sticking to their stand.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೆ, ನಿನ್ನೆಯೇ ನಿಮಗೆ ನಾನು ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಇದೇ ವಿಷಯದ ಬಗ್ಗೆ ನಿನ್ನೆ ಒಂದೂವರೆ ಗಂಟೆ ಚರ್ಚೆ ಮಾಡಿದ್ದೀರಿ. ಮತ್ತೆ ತಾವು ಅದೇ ವಿಷಯವನ್ನು ಈಗ ಚರ್ಚೆಗೆ ತೆಗೆದುಕೊಳ್ಳುತ್ತಿದ್ದೀರಿ.

SRI SIDDARAMAIAH : I am drawing your attention under separate Rule. We only framed this Rule.

ಅಧ್ಯಕ್ಷರು : ಆ ಬಗ್ಗೆ ನಾನು ನಾಳೆ Ruling ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : We only framed this Rule. ನೀವು Ruling ಕೊಟ್ಟಿಲ್ಲ.

ಅಧ್ಯಕ್ಷರು : ನಾಳೆ Ruling ಕೊಡುತ್ತೇನೆ. Wait for tomorrow.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಿಮ್ಮ ಗಮನಕ್ಕೆ ತಂದುಬಿಡುತ್ತೇನೆ, ನಾವೊಂದು ವಿಷಯವನ್ನು Rule 69ರ ಅಡಿಯಲ್ಲಿ raise ಮಾಡಿದಾಗ, ನಿಯಮ 191ರ ಅಡಿಯಲ್ಲಿ raise ಮಾಡಿದಾಗ, Rule 60ರ ಅಡಿಯಲ್ಲಿ raise ಮಾಡಿದಾಗ ನಮಗೆ Preliminary submission ಗೆ ಅವಕಾಶ ಕೊಟ್ಟಮೇಲೆ, ನಾವು ನಿಮ್ಮ ಗಮನ ಸೆಳೆದ ಮೇಲೆ, ನೀವು ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕೋ, ಬೇಡವೋ ಎನ್ನುವುದನ್ನು ನೀವು ತೀರ್ಮಾನ ಮಾಡಬೇಕು. ಆದರೆ, Preliminary submission ಮಾಡುವುದಕ್ಕಾಗುವುದಿಲ್ಲ ಎಂದರೆ ಹೇಗೆ? ತಾವು ಆ ಮೇಲೆ ತೀರ್ಪು ಕೊಡಿ.

ಅಧ್ಯಕ್ಷರು : ನಾನು ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಆದರೆ, ಈ ವಿಷಯದ ಬಗ್ಗೆ ಚರ್ಚೆಯಾಗಿದೆ.

ಶ್ರೀ ಸಿದ್ದರಾಮಯ್ಯ : ಅದು Rule 60ರ ಅಡಿಯಲ್ಲಿ ಆಗಿದೆ.

ಅಧ್ಯಕ್ಷರು : ಇದು ಹಕ್ಕುಚ್ಯುತಿಗೆ ಬರುತ್ತದೋ, ಇಲ್ಲವೋ ಎನ್ನುವುದನ್ನು ನಾನು ನೋಡಬೇಕು.

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ನನಗನಿಸುವುದೇನೆಂದರೆ, ಇದನ್ನು, Rule 60 ಅನ್ನು ಒಟ್ಟಿಗೆ ತರುವುದಕ್ಕಾಗುವುದಿಲ್ಲ. It is on a different footing.

ಶ್ರೀ ಸಿದ್ದರಾಮಯ್ಯ : ನಾನು ಇದನ್ನು Rule 60ರ ಅಡಿಯಲ್ಲಿ ತಂದಿಲ್ಲ. It is a different footing under different provision.

ಶ್ರೀ ಎಸ್.ಸುರೇಶ್‌ಕುಮಾರ್ : ನಿಯಮ 193(3)ಯಲ್ಲಿ, "The right to reise a question of privilege shall be governed by the following conditions, namely;" ಎಂದಿದೆ.

ಶ್ರೀ ಸಿದ್ದರಾಮಯ್ಯ : ಅವೆಲ್ಲವನ್ನೂ ನಾವು fulfill ಮಾಡುತ್ತೇವೆ.

ಶ್ರೀ ಎಸ್.ಸುರೇಶ್‌ಕುಮಾರ್ : ಅದರಲ್ಲಿ ಮೂರನೆಯದು ಏನಿದೆ ಎಂದರೆ, "The matter requires the intervention of the House" ಎಂದು.

ಶ್ರೀ ಸಿದ್ದರಾಮಯ್ಯ : intervention of the House ಎಂದರೆ ಅವರು.

ಶ್ರೀ ಎಸ್. ಸುರೇಶ್‌ಕುಮಾರ್ : ನಾನೀಗಾಗಲೇ ಹೇಳಿದ ಹಾಗೆ, House ಎಂದರೆ ಯಾರು ಎನ್ನುವ ಬಗ್ಗೆಯೂ Rules Committeeಗೆ ಹೋಗಬೇಕಾಗುತ್ತದೆ.

SRI SIDDARAMAIAH : He is the custodian of the House. We are all Members of the House and the man who sitting there, has to control the House. House ಅನ್ನು control ಮಾಡುವುದು Speaker, ತೀರ್ಮಾನ ಮಾಡುವುದಕ್ಕೆ ನೀವಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್ : "The matter requires the intervention of the House" ಅಂದಾಗ ಒಂದೊಂದು ಸಲ ಒಂದೊಂದನ್ನು ಹೇಳುತ್ತೀರಲ್ಲ. House includes members. ನಮಗೆ ನೀವಲ್ಲ ಅಂದರೆ ಹೇಗೆ?

Sri SIDDARAMAIAH : Not only you, We are all members of the house.

ಶ್ರೀ ಎಸ್. ಸುರೇಶ್‌ಕುಮಾರ್ : ನಾನೂ ಕೂಡ ಗೆದ್ದು ಬಂದಿದ್ದೇನೆ.

SRI SIDDARAMAIAH : You are also a member.

SRI S. SURESHKUMAR : Yes.

ಶ್ರೀ ಸಿದ್ದರಾಮಯ್ಯ : ನಾನು not only you ಎಂದು ಹೇಳಿದೆ. We are also members.

SRI S. SURESHKUMAR : "The matter requires intervention of the House" ಎಂದಾಗ, ನಾನು specific ಆಗಿ ಹಿಂದೆ

ಸಭಾಧ್ಯಕ್ಷರು ತಮ್ಮ ಪೀಠದಿಂದ ಕೊಟ್ಟ Rulings ಅನ್ನು quote ಮಾಡಿ, ತಮ್ಮ ಗಮನಕ್ಕೆ ತಂದಿದ್ದೇನೆ. ಅದನ್ನು ಗಮನಕ್ಕೆ ತೆಗೆದುಕೊಂಡು You pass a ruling. ಮತ್ತೆ ಅದನ್ನು ನಾವು question ಮಾಡುತ್ತಾ, ಇದರ ಬಗ್ಗೆಯೇ ಜಿಜ್ಞಾಸೆ ಮಾಡುವುದು ಒಳ್ಳೆಯದಲ್ಲ.

ಶ್ರೀ ಸಿದ್ದರಾಮಯ್ಯ : Question ಕೇಳುವುದು, ಅರಿಕೆ ಮಾಡುವುದು Limited purpose ಗೋಸ್ಕರ ಹೇಳಿದ್ದಾರೆ. Leader of the opposition and the members in general, ಮುಖ್ಯಮಂತ್ರಿಯವರು, ನೀವು Right to Information ಅಡಿಯಲ್ಲಿ ನೋಟೀಸ್ ಕೊಟ್ಟು ಉತ್ತರ ಪಡೆದುಕೊಳ್ಳ ಬೇಕೆಂದು ಹೇಳುವುದಾದರೆ, ಇಲ್ಲಿ Leader of the Opposition ಏಕೆ ಇರಬೇಕು? Why?

ಶ್ರೀ ಸಿ.ಟಿ. ರವಿ : "ಬೆಟ್ಟ ಅಗೆದು ಇಲ್ಲಿ ಹಿಡಿಯುವ ಕೆಲಸವೇಕೆ ಬೇಕು?"

ಶ್ರೀ ಸಿದ್ದರಾಮಯ್ಯ : I cannot understand. ನನ್ನನ್ನು Leader of the Opposition ಎಂದು ನೀವೇಕೆ recognize ಮಾಡಬೇಕು? Like all other members, all other citizens ನೀವು ತೆಗೆದುಕೊಳ್ಳಿ ಎಂದರೆ, Why there is a special staus for the Leader of the opposition under the rules?

ಅಧ್ಯಕ್ಷರು : ಈ ವಿಷಯವನ್ನು ಈಗ Close ಮಾಡೋಣ.

ಡಾ: ಹೆಚ್.ಸಿ. ಮಹಾದೇವಪ್ಪ : RTI ಕೆಳಗಡೆ, any member or citizen of the country can get the information. ಆ ತರಹ ಇದ್ದಮೇಲೆ ನಮ್ಮನ್ನೇಕೆ ಕರೆಯಬೇಕು? ಈ Houseನ್ನು ಏಕೆ ಕರೆಯಬೇಕು? Rules ಏಕೆ ಬೇಕು?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅವರಿಗೆ ಏಕೆ ಭಯ ಇದೆ ಎನ್ನುವುದು ಗೊತ್ತಿಲ್ಲ. **(ಗೊಂದಲ)** ಅವರಿಗೆ ನಿಮ್ಮ ಬಗ್ಗೆಯೂ ನಂಬಿಕೆ ಇಲ್ಲ, Rules Committee ಗೆ ಕೊಡಿ ಎಂದರೆ ಅದಕ್ಕೂ ನಂಬಿಕೆ ಇಲ್ಲ, ಮತ್ತೊಂದು Committee ಗೆ ಕೊಡಿ ಎಂದರೆ ಅದಕ್ಕೂ ನಂಬಿಕೆ ಇಲ್ಲ. ಸರ್ಕಾರದವರು

ಯಾವುದಕ್ಕೂ ಬಗ್ಗುವುದಿಲ್ಲವೆಂದರೆ ನೀವು ನಮ್ಮ ರಕ್ಷಣೆಗೆ ಬರದಿದ್ದರೆ ಕಷ್ಟವಾಗುತ್ತದೆ. ನಾವು ನಿಮ್ಮ Ruling ಅನ್ನು ಪ್ರಶ್ನೆ ಮಾಡುವುದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) : ತಾವು Ruling ಕೊಟ್ಟಾಗಿದೆ.

SRI SIDDARAMAIAH : I am appealing to you. Please reconsider. ದಯವಿಟ್ಟು ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಿ. Whatever required under the rule, ಸಹಿ ಮಾಡಿರುವ ಸದಸ್ಯರೆಲ್ಲರೂ ನಿಂತುಕೊಳ್ಳುತ್ತೇವೆ. ನಮಗೆ ಅವಕಾಶ ಮಾಡಿಕೊಡಿ. ನಾವು ಚರ್ಚೆ ಮಾಡುತ್ತೇವೆ.

ಅಧ್ಯಕ್ಷರು : ನಾನು ಇದರ ಬಗ್ಗೆ ನಂತರ ನಿರ್ಣಯ ಕೊಡುತ್ತೇನೆಂದು ಹೇಳಿದ್ದೇನೆ. I keep reserved regarding this Ruling.

ಶ್ರೀ ಸಿದ್ದರಾಮಯ್ಯ : ಈ ಸರ್ಕಾರ ಮೊಂಡ ಸರ್ಕಾರ, ಈ ಸರ್ಕಾರಕ್ಕೆ ಪ್ರಜಾಪ್ರಭುತ್ವದಲ್ಲೆ ನಂಬಿಕೆ ಇಲ್ಲ ಈ ಸರ್ಕಾರ ಪ್ರಜಾಪ್ರಭುತ್ವವನ್ನು ಹತ್ತಿಕ್ಕಲಿಕ್ಕೆ ಹೊರಟಿದೆ, ಈ ಸರ್ಕಾರದವರು ವಿರೋಧ ಪಕ್ಷದ ನಾಯಕರ ಹಕ್ಕುಗಳನ್ನು ಹತ್ತಿಕ್ಕಲಿಕ್ಕೆ ಕೊರಟಿದ್ದಾರೆ, ಇದನ್ನು ನಾವು ಪ್ರತಿಭಟನೆ ಮಾಡುತ್ತೇವೆ. ಈ ಸರ್ಕಾರ ಜನವಿರೋಧಿ ಸರ್ಕಾರ, ಈ ಸರ್ಕಾರ ಪ್ರಜಾಪ್ರಭುತ್ವ ವಿರೋಧ ಸರ್ಕಾರ, ಇದು ಸಂವಿಧಾನ ವಿರೋಧ ಸರ್ಕಾರ, ಇವರು ಪ್ರಜಾತಂತ್ರದ ಮೌಲ್ಯಗಳನ್ನು ಹಾಳು ಮಾಡುತ್ತಿದ್ದಾರೆ, ಎಲ್ಲಾ ಶಾಸಕರ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿದ್ದಾರೆ. ಅದಕ್ಕೋಸ್ಕರ ನಾವು ಇದನ್ನು ವಿರೋಧ ಮಾಡಿ walkout ಮಾಡುತ್ತಿದ್ದೇವೆ. We will walk out.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಎಸ್. ಸುರೇಶ್‌ಕುಮಾರ್ : ಸಭಾಧ್ಯಕ್ಷರು ಒಂದು Ruling ಕೊಟ್ಟಿದ್ದನ್ನು ಗಮನಕ್ಕೆ ತಂದೆ. ತಾವೂ ಕೂಡ ನನ್ನ Ruling ಅನ್ನು reserve ಮಾಡಿದ್ದೇನೆ, ಕೊಡುತ್ತೇನೆಂದು ಹೇಳಿದಿರಿ. They questioned the Speaker and walkout, ನಿಜವಾಗಿಯೂ ಇವರ ವರ್ತನೆ privilege ಅಡಿಯಲ್ಲಿ ಬರುತ್ತದೆ. ಇದು breach of privilege. ಇವತ್ತು ವಿರೋಧ